ಬೆಲೆ ರೂ.2.50
D.O.P - 15th of every month at Udupi Sorting Office

ಸ್ಥಾನಿಕ ಬ್ರಾಹ್ಮಣರ ವಿಶ್ವಕೋಶದಲ್ಲಿ ನಿಮ್ಮ ವಿಳಾಸವನ್ನು ನೋಂದಾಯಿಸಿರಿ
ನಿಮ್ಮ ಮೊಬೈಲ್‌ಗೆ
STHANIKA
PLAY STOREನಿಂದ STHANIKA ಆ್ಯಪನ್ನು ವರ್ಗಾಯಿಸಿಕೊಳ್ಳಿ
ಸಮಾಜಬಾಂಧವರೊಡನೆ ಸದಾ ಸಂಪರ್ಕದಲ್ಲಿರಿ

# ಶ್ರೀ ಶಾರದಾ

ಮಾಸಪತ್ರಿಕೆ – 15 ಸೆಪ್ಟೆಂಬರ್ 2020

॥ ಧಿಯೋ ಯೋನಃ ಪ್ರಚೋದಯಾತ್ ॥

Regn.No.KAR/KAN/2000/2758 ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.) ಶ್ರೀ ಶಾರದಾ ಮಂಟಪ, ಶ್ರೀ ಶಾರದಾನಗರ, ಕುಂಜಿಬೆಟ್ಟು, ಉಡುಪಿ – 576 102. ☎ 2520754

ಸಂಪುಟ–20 ಸಂಚಿಕೆ–09 ಪುಟಗಳು–6 Registered Under No.UDP/1260/2018-2020 Licenced to Post without Prepayment Licence No. SK/WPP/UDP/81/2018-20

## ಶ್ರೀ ಶಾರದಾ ಮಂಟಪದಲ್ಲಿ ಋಗುಪಾಕರ್ಮ

ಉಡುಪಿಯ ಶ್ರೀ ಶಾರದಾ ಮಂಟಪದಲ್ಲಿ ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘದ ವತಿಯಿಂದ ತಾ.31.08.2020ರಂದು ಋಗುಪಾಕರ್ಮವನ್ನು ಆಚರಿಸಲಾಯಿತು. ಕೊರೋನಾ ನಿಮಿತ್ತ ಸರಳವಾಗಿ ಆಚರಿಸಲಾದರೂ ಸಮಾಜ ಬಾಂಧವರ ತುಂಬು ಸಹಕಾರದಿಂದ ಧಾರ್ಮಿಕ ವಿಧಾನಗಳನ್ನು ಚಾಚೂ ತಪ್ಪದೆ ಪರಿಪಾಲಿಸಿಕೊಂಡು ಆಚರಿಸಲಾಯಿತು. ಬೆಳಿಗ್ಗೆ 10 ಗಂಟೆಯಿಂದ ಶ್ರೀ ರವಿ ಉಪಾಧ್ಯಾಯ ಇವರ ನೇತೃತ್ವದಲ್ಲಿ ನಡೆದ ಹೋಮಹವನಾದಿಗಳಲ್ಲಿ ಸಮಾಜ ಬಾಂಧವರು ಭಾಗವಹಿಸಿ ನೂತನ



ಯಜ್ಞೋಪವೀತ ಧಾರಣೆ ಮಾಡಿದರು. ಸಾಮಾಜಿಕ ಅಂತರವನ್ನು ಕಾಪಾಡಿಕೊಂಡು ನಡೆದ ಈ ಸಮಾರಂಭದಲ್ಲಿ ಸುಮಾರು 50 ಜನ ಸಮಾಜ ಬಾಂಧವರು ಭಾಗವಹಿಸಿ ಭೋಜನವನ್ನು ಸ್ವೀಕರಿಸಿದರು. ಅಧ್ಯಕ್ಷರಾದ ಶ್ರೀ ಕೆ.ಮಂಜುನಾಥ್ ಹೆಬ್ಬಾರ್, ಕಾರ್ಯದರ್ಶಿ ಶ್ರೀ ಯು.ಅರವಿಂದ ಕುಮಾರ್, ಕೋಶಾಧಿಕಾರಿ ಶ್ರೀ ಬಿ. ಜಯರಾಮ ರಾವ್ ಹಾಗೂ ಇನ್ನಿತರ ಪದಾಧಿಕಾರಿಗಳು ಭಾಗವಹಿಸಿದ್ದರು. ಸಂಘದ ನಿಕಟಪೂರ್ವ ಕಾರ್ಯದರ್ಶಿ ಶ್ರೀ ಕೆ.ಸುರೇಶ್ ರಾವ್ ಕುತ್ಪಾಡಿ ಇವರು ಕತೃಗಳಾಗಿ ಸಹಕರಿಸಿದರು.

## ಶ್ರೀ ಶಾರದಾ ದೇವಸ್ಥಾನದಲ್ಲಿ ಹೂವಿನ ಪೂಜೆ



ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ ಕುಂಜಿಬೆಟ್ಟು ಉಡುಪಿಯ ವತಿಯಿಂದ ಶ್ರಾವಣ ಶುಕ್ರವಾರದ ಪ್ರಯುಕ್ತ ವರ್ಷಂಪ್ರತಿಯಂತೆ ಮಹಿಳಾ ವೇದಿಕೆ ಮತ್ತು ಸಂಘದ ವತಿಯಿಂದ ಸಾಮೂಹಿಕ ಹೂವಿನ ಪೂಜೆಯು ತಾ.28–08–2020ರಂದು ನಡೆಯಿತು. ಕೊರೊನಾ ನಿಯಮಾವಳಿ ಪ್ರಯುಕ್ತ ಸರಳ ರೀತಿಯಲ್ಲಿ ಆಚರಿಸಲಾಯಿತು. ದೇವಿಯನ್ನು ಪಟ್ಟೆಪೀತಾಂಬರ, ಪುಷ್ಪಗಳಿಂದ ಅಲಂಕರಿಸಲಾಗಿತ್ತು. ವಾಡಿಕೆಯಂತೆ ಭಜನೆ, ಲಲಿತಾಸಹಸ್ರನಾಮ, ಶ್ರೀ ಶಂಕರಸಹಸ್ರನಾಮಾರ್ಚನೆಗಳನ್ನು ಪಠಿಸಿ ಮಹಾಪೂಜೆ ನೆರವೇರಿಸಲಾಯಿತು. ಸಂಘದ ಅಧ್ಯಕ್ಷರು, ಪದಾಧಿಕಾರಿಗಳು, ಮಹಿಳಾವೇದಿಕೆಯ ಕಾರ್ಯಕರ್ತರು ಹಾಗೂ ಭಕ್ತಾಧಿಗಳು ಉಪಸ್ಥಿತರಿದ್ದರು.

## ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.), ಉಡುಪಿ

### ಸಮಾಜಬಾಂಧವರಲ್ಲಿ ನಿವೇದನೆ

ಉಡುಪಿಯ ಶ್ರೀ ಶಾರದಾ ಮಂಟಪದ ಭೋಜನಗೃಹವು ಆಧುನಿಕ ರೀತಿಯಲ್ಲಿ ನವೀಕರಣಗೊಳ್ಳುತ್ತಿದ್ದು ಅಂದಾಜು 50 ಲಕ್ಷ ರೂ ವೆಚ್ಚವನ್ನು ನಿರೀಕ್ಷಿಸಲಾಗಿದೆ. ಈ ಸಂದರ್ಭದಲ್ಲಿ ಸಮಾಜಬಾಂಧವರ ಸಹಾಯವನ್ನು ಆಡಳಿತ ಮಂಡಳಿಯು ಅಪೇಕ್ಷಿಸುತ್ತಿದೆ. ಅಂತೆಯೇ ರೂ.10 ಸಾವಿರಕ್ಕೆ ಮಿಗಿಲಾಗಿ ದೇಣಿಗೆಯಿತ್ತವರ ಹೆಸರನ್ನು ಶಾಶ್ವತ ಫಲಕದಲ್ಲಿ ಬರೆಯಲಾಗುವುದು. ರೂ.30 ಸಾವಿರ ದೇಣಿಗೆಯಿತ್ತವರಿಗೆ ಮುಂದಿನ ಹತ್ತು ವರ್ಷಗಳಲ್ಲಿ ಒಂದು ಕಾರ್ಯಕ್ರಮಕ್ಕೆ ಸಭಾಭವನವನ್ನು ಲಭ್ಯತೆಯ ಅನುಗುಣವಾಗಿ ಉಚಿತವಾಗಿ ನೀಡಲಾಗುವುದು. ಈ ಕೊಡುಗೆಯು ಕಾಮಗಾರಿ ಮುಕ್ತಾಯವಾಗುವ ತನಕ ಮಾತ್ರ ಊರ್ಜಿತದಲ್ಲಿರುವುದು. ಸಮಾಜಬಾಂಧವರು ತನು– ಮನ–ಧನಗಳ ಸಹಕಾರದೊಂದಿಗೆ ಈ ಕೊಡುಗೆಯನ್ನು ಉಪಯೋಗಿಸಿಕೊಳ್ಳಬೇಕಾಗಿ ವಿನಂತಿ.

ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ:
ಅಧ್ಯಕ್ಷರು : ಶ್ರೀ ಕೆ.ಮಂಜುನಾಥ ಹೆಬ್ಬಾರ್ (9611099894)
ಕಾರ್ಯದರ್ಶಿ : ಶ್ರೀ ಯು.ಅರವಿಂದ ಕುಮಾರ್ (9343560647)

ತಮ್ಮ ದೇಣಿಗೆಯನ್ನು ಸಂಘದ ಈ ಕೆಳಗಿನ ಖಾತೆಗೆ ವರ್ಗಾಯಿಸಬಹುದು :
ಖಾತೆಯ ಹೆಸರು : STHANIKA BRAHMANA SANGHA(R)
SYNDICATE BANK, CARSTREET BRANCH UDUPI,
SB A/C no.01092200002928 IFSC code SYNB0000109

–ಆಡಳಿತ ಮಂಡಳಿ



## ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ, (ರಿ.)

ಶ್ರೀ ಶಾರದಾ ಮಂಟಪ, ಶ್ರೀ ಶಾರದಾ ನಗರ, ಕುಂಜಿಬೆಟ್ಟು,
ಉಡುಪಿ – 576 102.

### ಆಮಂತ್ರಣ

ಮಾನ್ಯ ಸಮಾಜಬಾಂಧವರೇ,

ಸ್ವಸ್ತಿ! ಶ್ರೀ ಶಾರ್ವರೀ ನಾಮ ಸಂವತ್ಸರದ ತುಲಾ ಮಾಸ ದಿನ ೮ ಸಲುವ
ನಿಜ ಆಶ್ವಯುಜ ಶುದ□ ಯು, ತಾ.25–10–2020ನೇ ಆದಿತ್ಯವಾರ

ವಿಜಯದಶಮಿ ದಿನದಂದು

**ಶ್ರೀ ಚಂಡಿಕಾಯಾಗ ಮತ್ತು ಶ್ರೀ ಶಾರದಾ ಪೂಜಾ**

ಕಾರ್ಯಕ್ರಮವು ಶ್ರೀ ಶಾರದಾ ಮಂಟಪದಲ್ಲಿ ಜರಗಲಿದೆ. ಸರ್ವರೂ ಬಂಧು–ಬಾಂಧವರೊಡಗೂಡಿ ಆಗಮಿಸಿ, ಆ ದಿನ ನಡೆಯಲಿರುವ ಎಲ್ಲಾ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು ಕಾರ್ಯಕ್ರಮವನ್ನು ಸಂಪನ್ನಗೊಳಿಸಬೇಕೆಂದು ಅಪೇಕ್ಷಿಸುತ್ತೇವೆ.

ಶ್ರೀ ಯು. ಅರವಿಂದ ಕುಮಾರ್, ಕಾರ್ಯದರ್ಶಿ
ಶ್ರೀ ಬಿ. ಜಯರಾಮ ರಾವ್, ಕೋಶಾಧಿಕಾರಿ
ಶ್ರೀ ಕೆ.ಮಂಜುನಾಥ ಹೆಬ್ಬಾರ್, ಅಧ್ಯಕ್ಷರು

ವಿ.ಸೂ : ಈ ವರ್ಷವೂ ನವರಾತ್ರಿಯ ಪ್ರತೀ ದಿನ ಸಂಜೆ ಶ್ರೀ ಶಾರದಾ ದೇವಸ್ಥಾನದಲ್ಲಿ ದುರ್ಗಾನಮಸ್ಕಾರ ಪೂಜೆಯನ್ನು ಏರ್ಪಡಿಸಲಾಗುವುದು. ದುರ್ಗಾನಮಸ್ಕಾರ ಸೇವೆಯ ಕರ್ತೃಗಳಾಗಬಯಸುವವರಿಗೆ ರೂ.5000 ಸೇವಾದರ ನಿಗದಿಪಡಿಸಲಾಗಿದೆ. ಆಸಕ್ತ ಭಕ್ತರು ವಿವರಗಳಿಗಾಗಿ ಕಾರ್ಯದರ್ಶಿ ಶ್ರೀ ಯು. ಅರವಿಂದ ಕುಮಾರ್ 9343560647ರನ್ನು ಸಂಪರ್ಕಿಸಬೇಕಾಗಿ ಕೋರುತ್ತೇವೆ.

ಈ ಎಲ್ಲಾ ಕಾರ್ಯಕ್ರಮಗಳಲ್ಲಿ ಸಾಮಾಜಿಕ ಅಂತರವನ್ನು ಕಾಪಾಡಿಕೊಂಡು, ಮಾಸ್ಕ್‌ಧರಿಸಿ ಸಹಕರಿಸಬೇಕೆಂದು ಕೋರುತ್ತೇವೆ.



*With Best Compliments from :*
*Dr. Sanath S. Rao*
M.B.B.S., M.D.(Derm, Vene, Lep)
Fellow Cosmetology (St. John's Hospital)
SKIN SPECIALIST & COSMETOLOGIST

Clinic : 0820-6529474
Mobile : 9886093199
drsanathrao@gmail.com

JALAJA SKIN CARE AND COSMETOLOGY CLINIC
Sai Harsha Square, Koladapete (Thenkapete), Old Post Office Road, Udupi - 576 101.
Visit us at : www.jalajaskincare.com
Timings : 9-30 a.m. to 2-00 p.m., 4-30 p.m. to 8-00 p.m.
Also available at Lalith Hospital (12-30 a.m. to 2-00 p.m.)

# "ಅಂಚೆಚೀಟಿಯಲ್ಲಿ ಮಹಾಭಾರತದ ರಾಧಾಕೃಷ್ಣ"

ಲೇಖನ : ವೈ ಮೋಹನ ರಾವ್
ಅಂಚೆಚೀಟಿ ಸಂಗ್ರಹ : ಕೃಷ್ಣಯ್ಯ ಎಂ.ಕೆ.

ಗುರುವಾಯೂರು ಕ್ಷೇತ್ರದ ದೇವರಾದ ಗುರುವಾಯೂರಪ್ಪನ ಭಕ್ತನಾದ ನಾರಾಯಣ ಭಟ್ಟಾದ್ರಿ 1560ರಲ್ಲಿ ಜನಿಸಿದರು. ತನ್ನ ಗುರುಗಳಾದ ಪಿಶಾರಡಿ ಪಕ್ಷವಾತ ಹಿಡಿದು ಹಾಸಿಗೆ ಹಿಡಿದರು. ನಾರಾಯಣ ಭಟ್ಟಾದಿರಿಯು ಗುರುವಾಯೂರು ಕ್ಷೇತ್ರದಲ್ಲಿ ಗುರುವಿಗಾಗಿ ಮೊರೆಯಿಟ್ಟರು. ಅಂತೆಯೇ ಪಿಶಾರಡಿಯವರು ವಾತಮುಕ್ತರಾದರು. ಆದರೆ ಪಕ್ಷವಾತವು ನಾರಾಯಣ ಭಟ್ಟಾದಿರಿಯವರನ್ನು ಪ್ರವೇಶಿಸಿತು. ಆಗ ಭಟ್ಟಾದಿರಿಯವರು ಗುರುವಾಯೂರು ಪ್ರಾಂಗಣದಲ್ಲೇ ಇದ್ದು ಪ್ರತಿನಿತ್ಯ ಹತ್ತು ಶ್ಲೋಕದಂತೆ ಬಿಡದೆ ನೂರು ದಿನ ಸಾವಿರ ಶ್ಲೋಕಗಳಲ್ಲಿ ಭಗವಂತನ ಲೀಲೆಯನ್ನು ಕೊಂಡಾಡಿದರು. ಆಗ ತನಗೆ ಬಾಧಿಸಿದ್ದ ಕಠಿಣವಾದ ವಾತರೋಗದಿಂದ ಮುಕ್ತರಾದರು. ಅವರು ನೂರನೆಯ ದಶಕವನ್ನು (ಸ್ತೋತ್ರ) ರಚಿಸಿ ಅರ್ಪಿಸಿದಾಗ ದೇವರನ್ನೇ ಕಂಡರಂತೆ. ಈ ಕೃತಿಯು 'ಶ್ರೀ ನಾರಾಯಣೀಯಂ' ಎಂಬ ಅಭಿದಾನದಿಂದ ಪ್ರಸಿದ್ಧಿ ಪಡೆಯಿತು. ಈ ಮೂಲ ಸಂಸ್ಕೃತ ಕೃತಿಯನ್ನು ಕನ್ನಡ ಭಾಷೆಗೆ ಸ್ವತಂತ್ರ ಶೈಲಿಯಲ್ಲಿ ಪದ್ಯರೂಪದಲ್ಲಿ ಸಾಮಾನ್ಯರಿಗೂ ಅರ್ಥವಾಗುವಂತೆ ಬರೆದವರು ಗುಂಡಿಹಿತ್ಲು ರಾಮರಾಯರು. ಅದನ್ನು ಪ್ರಕಟಣೆಗೆ ತರಲು ಅವರಿಂದ ಅಸಾಧ್ಯವಾಯಿತು. ಅವರ ಅಭೀಷ್ಟೆಯನ್ನು ಈಡೇರಿಸಿದವರು ಅವರ ಮಗಳು ಡಾ.ಅನಿತಾ ತೇಜಸ್ವಿ. ಕನ್ನಡದ ಪ್ರಸಿದ್ಧ ನವ್ಯಕವಿ ಎಂ.ವ್ಯಾಸರ ಪುತ್ರ ಡಾ। ತೇಜಸ್ವಿ ವ್ಯಾಸರ ಪತ್ನಿ ಡಾ. ಅನಿತಾ ತೇಜಸ್ವಿ. ಈ ಲೇಖನದಲ್ಲಿ ಭಾರತ ಸರಕಾರವು ಪ್ರಕಟಿಸಿದ ಶ್ರೀ ಕೃಷ್ಣನ ಕೆಲವು ಅಂಚೆ ಚೀಟಿಗಳನ್ನು ಹಾಗೂ ಅವುಗಳ ಭಾವಾರ್ಥವಿರುವ ಶ್ರೀ ನಾರಾಯಣ ಭಟ್ಟಾದಿರಿಯವರ ಶ್ಲೋಕಗಳನ್ನು ಉದಾಹರಿಸಲಾಗಿದೆ.




**ಅಂಚೆಚೀಟಿ 1 : ಯಶೋದೆ ಕೃಷ್ಣ**

ನಂದನ ಸತಿ ಯಶೋದೆಯದಂತಹ
ಆನಂದ ಪಟ್ಟಳೋ ಪ್ರಭು ನಿನ್ನನು
ಮಡಿಲಲಿ ಹಾಕಿ ಮುದ್ದಾಡುತಾ
ನೋಡುತಿರೆ ನಿನ ನಗುಮುಖವನು
ಹೇ ಸರ್ವೋತ್ತಮನೇ ಹರಿಯೆ ಎನ್ನಯ
ವ್ಯಾಧಿಯನ್ನೊಮ್ಮೆ ನೀ ಗುಣ ಮಾಡೆಯಾ।

**ಅಂಚೆಚೀಟಿ 2,3 ಕಾಳಿಯ ಮರ್ದನಕೃಷ್ಣ**

ಹೇ ಪ್ರಭು ನೀನು ಈ ಪರಿಯಲ್ಲಿ
ನರ್ತಿಸೆ ಕಾಳಿಯನ ಹೆಡೆಯಲ್ಲಿ
ನೋಡುತ ನಿಂತ ಗೋಪಾಲಕರು
ಅತ್ಯಾನಂದದಿ ನಲಿದಾಡಿದರು.
ಋಷಿಗಳು ಪರಿಪರಿಯಲಿ ಸ್ತುತಿಗೈದರು.
ದೇವತೆಗಳು ಹೂಮಳೆ ಸುರಿಸಿದರು.
ಹೇ ಗುರುವಾಯೂರಪ್ಪ ನೀ ಒಲಿದು
ಎನ್ನಯೀ ವ್ಯಾಧಿಯನು ಗುಣಪಡಿಸುತ ರಕ್ಷಿಸು।

**ಅಂಚೆಚೀಟಿ 4 ರಾಧಾಕೃಷ್ಣ**

ಗೋಪಿಕಾಲೋಲೆ ಶ್ರೀರಾಧೆಯ
ತುಂಗಾಭಾಸ ಪಯೋಧರಗಳ
ಗಾಢವಾಗಿ ಆಲಂಗಿಸುತಾ
ಆನಂದಿಸ ಲೋಲುಪಚಿತ್ತನಾದ
ಹೇ ಗೋಪಿಕಾಸ್ತ್ರೀಲೋಲನಾದ
ಗುರುಪರ್ವಪುರೆ ಪತಿಯಾದ
ಹೇ ಸ್ವಾಮಿಯೇ ನನ್ನ ನೀನು
ಎಲ್ಲಾ ರೋಗಗಳಿಂದ ಮುಕ್ತನಾಗಿಸು।

**ಅಂಚೆಚೀಟಿ 5 ಗೋಪಿಕೆಯರ ಕೃಷ್ಣ**

ನಿನ್ನ ಮಾತಿನ ಮೋಡಿಗೆ ಸಿಲುಕಿದ
ಗೋಪಿಕೆಯರ ಆನಂದ ಹೆಚ್ಚಿ
ಘಣೀಭೂತವಾಯಿತು, ಮುಂದೆ
ಅವರ ಕೂಡೇ ವಿಹಾರ ನಿರತನಾಗಿ
ರಾಸಕ್ರೀಡೆಯಲಿ ಅವರ ಮುಳುಗಿಸಿ
ನೀನು ಮುಳುಗೆದ್ದು ಉತ್ಸಾಹಿತನಾದೆ.
ಹೀಗೆ ಉಲ್ಲಾಸಿತನಾದ ಗುರುವಾಯೂರಪ್ಪನೇ
ನನ್ನೆಲ್ಲಾ ರೋಗ–ಸಂಕಟಗಳಿಂದ ಪಾರುಗೊಳಿಸು.

**ಅಂಚೆಚೀಟಿ 6 ಗೀತಾಚಾರ್ಯ ಕೃಷ್ಣ**

ಪಾರ್ಥನಿಗೆ ಸಾರಥಿಯಾದಂತಹ
ಹೇ ಕೃಷ್ಣನೇ ಯುದ್ಧದಿ ಪ್ರಿಯರಾದ....
ಖಿನ್ನತೆಯಿಂದ ಯುದ್ಧಕೆ ಹೇಸಿ
ನಿಂತಿರ್ದ ಅರ್ಜುನನ ಕಂಡು
ಆತ್ಮಜ್ಞಾನದ ಬೋಧನೆಯನ್ನಿತ್ತು
ಈ ಜೀವಾತ್ಮವು ಶಾಶ್ವತವಾದುದು
ಇಂತಿರುವಾಗ ಕೊಲುವವರ್‍ಯಾರು
ಬುವಿಯಲಿ ಕೊಲ್ಲಲ್ಪಡುವವರ್‍ಯಾರು....
ಎನ್ನುತ ನಾನಾ ದಿಶೆಯಲೂ ವ್ಯಾಪಿಸಿ
ತುಂಬಿದ ವಿಶ್ವರೂಪವ ಪ್ರಕಟಿಸಿ
ಅವನ ಮನಸ್ಸಿನ ದೌರ್ಬಲ್ಯವನು
ದೂರಗೊಳಿಸಿ ಪರಿಹರಿಸಿದೆ ಪ್ರಭು ನೀನು॥
ಇಂತೊಪ್ಪುವ ಹೇ ಪ್ರಭು ನೀನೆನಗೆ
ಸಂಕಟದಿಂದ ಮುಕ್ತಿಯ ನೀಡು
ಗುರುವಾಯೂರಪ್ಪನೇ ಕಾಪಾಡು

**ಅಂಚೆಚೀಟಿ 7 ಕೊಳಲನೂದುವ ಕೃಷ್ಣ**

ಲೋಕವೇ ಮರುಳಾಗುವ ತೆರದಿಂದ
ತನ್ನ ಸುಕೋಮಲ ಬೆರಳುಗಳನ್ನು
ಕೊಳಲಿನ ರಂಧ್ರಗಳಲಿ ಓಡಿಸುತ
ತಾಳಕೆ ಸರಿಯಾಗಿ ಪದವನ್ನು
ಅಂದದಿ ಮೃದುವಾಗಿ ನುಡಿಸುತಲಿ
ಕೊಳಲೂದುವ ನಿನ್ನಯ ಚಿತ್ರವನು
ಗೋಪಿಯರು ಮನಪಟಲದಿ ಬರೆದು
ಆನಂದಿಸುವರು ನಿನ್ನ ನೆನೆನೆನೆದು

**ಅಂಚೆಚೀಟಿ 8 ಗೀತಗೋವಿಂದ–ಮಹಾಭಾರತ**

'ನಾರಾಯಣೀಯ'ವೆನ್ನುವ ಹೆಸರಲಿ
ಸರ್ವರ ಬಾಯಲ್ಲೂ ಕರೆಯಲಡಲಿ
ಹೇ ಪ್ರಭು ನಿನ್ನ ಗುಣರೂಪಗಳನ್ನೂ
ನಿನ್ನಯ ನಾನಾ ಅವತಾರಗಳನ್ನೂ
ಲೀಲೆಗಳನ್ನೂ ಬಣ್ಣಿಸುವಂತಹ
ಈ ಕಾವ್ಯವು ಇಳೆಯಲ್ಲಿ ಅನವರತ
ನೀಡಲಿ ಸರ್ವರಿಗೂ ಭಾಗ್ಯವನೂ
ದೀರ್ಘಾಯುಷ್ಯ ಆರೋಗ್ಯವನೂ.

**ಅಂಚೆಚೀಟಿ 9 ದ್ವಾರಕಾ ಕೃಷ್ಣ**

ವಿಷ್ಣು ಪ್ರತಿಮೆಯೊಂದು ದ್ವಾಪರ ಯುಗದ ದ್ವಾರಕೆಯಲ್ಲಿತ್ತು. ಯುಗ ಸಮಾಪ್ತವಾದಾಗ ಪ್ರಳಯ ಆವರಿಸಿ ದ್ವಾರಕೆಯು ನೀರಲ್ಲಿ ಮುಳುಗುತ್ತಿತ್ತು. ಶ್ರೀ ಕೃಷ್ಣನ ಸೂಚನೆಯಂತೆ 'ಉದ್ದವ' ನು ದೇವಗುರು ಬೃಹಸ್ಪತಿಗೆ ದ್ವಾರಕೆಯ ವಿಗ್ರಹವನ್ನು ರಕ್ಷಿಸಬೇಕೆಂದು ಬಿನ್ನವಿಸಿದನು. ದ್ವಾರಕೆಯು ಮುಳುಗುತ್ತಿದ್ದಾಗ ನೀರಿನಲ್ಲಿ ತೇಲುತ್ತಿದ್ದ ವಿಷ್ಣುಮೂರ್ತಿಯನ್ನು ನೋಡಿದ ಗುರುವು ವಾಯುವಿಗೆ ಸೂಚಿಸಿದಂತೆ ವಾಯುದೇವನು ಸೂಕ್ತ ಸ್ಥಳಕ್ಕಾಗಿ ಈ ಪ್ರದೇಶಕ್ಕೆ ಬಂದರು. ಗುರು ಮತ್ತು ವಾಯು ಇದೇ ಸೂಕ್ತ ಸ್ಥಳವೆಂದು ಬಿಂಬವನ್ನು ಪ್ರತಿಷ್ಠಾಪಿಸಿದರು. ಗುರು ಮತ್ತು ವಾಯು ಸೇರಿದ ಊರು ಗುರುವಾಯೂರು ಎಂದು ಪ್ರಸಿದ್ಧಿ ಪಡೆಯಿತು.


## ಶ್ರೀ ಶಾರದಾ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ (ನಿ.)

ಎಲ್.ನಂ.31017, ಭೂವರಾಹ ಕಾಂಪ್ಲೆಕ್ಸ್, ವಾದಿರಾಜ ರಸ್ತೆ, ಉಡುಪಿ - 576 101. ಫೋನ್ : 2522408

ನಿಮ್ಮ ಕನಸಿನ ಮನೆ ಸಾಕಾರಗೊಳಿಸಿ
**"ಗೃಹ ಸಾಲ"**
ಸಂಘದ ಪ್ರಾಥಮಿಕ ಸದಸ್ಯರಿಗೆ 11.50%
(ಷರತ್ತುಗಳು ಅನ್ವಯ)

| | | |
|---|---|---|
| ವಾಹನ ಸಾಲ | : | 12.5% |
| ಹಳೆಯ ವಾಹನ | : | 14% |
| ಆಭರಣ ಸಾಲ | : | 11.5% |
| ವೈಯಕ್ತಿಕ ಸಾಲ | : | 16% |
| ಶಿಕ್ಷಣ ಸಾಲ | : | 12% |
| ಅಡಮಾನ ಸಾಲ | : | 13% |

**ಠೇವಣಿಗಳ ಬಡ್ಡಿದರ**

| | | | |
|---|---|---|---|
| ಉಳಿತಾಯ ಖಾತೆ | : 5% | ನಿತ್ಯನಿಧಿ ಠೇವಣಿ | : 5% |
| 46 ದಿನಗಳಿಂದ 364 ದಿನಗಳು | : 6%, | 1 ವರ್ಷ ಮತ್ತು ಹೆಚ್ಚಿನ ಅವಧಿಗೆ | : 8.5% |

(ಹಿರಿಯ ನಾಗರಿಕರಿಗೆ/ಸಂಘ ಸಂಸ್ಥೆಗಳಿಗೆ 1 ವರ್ಷಕ್ಕಿಂತ ಹೆಚ್ಚಿನ ಅವಧಿಯ ಠೇವಣಿಗಳಿಗೆ 0.5% ಹೆಚ್ಚಿಗೆ ನೀಡಲಾಗುವುದು)

2011-12ರಿಂದ 2016-17ನೇ ವರ್ಷದ ವರೆಗಿನ ಲಾಭಾಂಶವನ್ನು ಪಡೆದುಕೊಳ್ಳದಿರುವ ಸದಸ್ಯರು ಸಂಘದ ವ್ಯವಹಾರದ ಸಮಯದಲ್ಲಿ ಬಂದು ಪಡೆದುಕೊಳ್ಳಬಹುದು. ಅಥವಾ ತಮ್ಮ ಹೆಸರಿನಲ್ಲಿ ಉಳಿತಾಯ ಖಾತೆಯನ್ನು ತೆರೆದಲ್ಲಿ ಪ್ರತಿ ವರ್ಷದ ಲಾಭಾಂಶವನ್ನು ಉಳಿತಾಯ ಖಾತೆಗೆ ಜಮೆ ಮಾಡಲಾಗುವುದು.

ನಿಮ್ಮ ಹತ್ತಿರದ ಶಾಖೆಯನ್ನು ಇಂದೇ ಸಂಪರ್ಕಿಸಿರಿ

ಪ್ರಧಾನ ಕಛೇರಿ (☎ 2522408) ಕುಕ್ಕಿಕಟ್ಟೆ ಶಾಖೆ (☎ 2592133) ಪಡುಬಿದ್ರಿ ಶಾಖೆ (☎ 2556608) ಕೋಟೇಶ್ವರ ಶಾಖೆ (☎ 9341854114)



**With Best Compliments From :**




9845084866, 9880742159, 9886199769
1st Floor, New Milagres Mansion, Falnir Road, Mangalore - 575001
info@landtrades.in
sales@landtrades.in
Ph: 0824 2425424
www.landtrades.in
CRISIL DA3+ CREDAI

## ನಿಧನ

### ಶ್ರೀ ವೈ.ವಿ.ಮೋಹನ್ ರಾವ್



ಕರಾಡ ನಿವಾಸಿ ಶ್ರೀ ವೈ.ವಿ.ಮೋಹನ್‌ರಾವ್ 2.09.2020 ರಂದು ನಿಧನ ಹೊಂದಿದರು.

**** ****

### ಶ್ರೀಮತಿ ಅಪ್ಸರ



ಕೂಡ್ಲಿ ಬಾರಕೂರು ಶ್ರೀ ಸತೀಶ್ ರಾವ್ ಇವರ ಪತ್ನಿ ಅಪ್ಸರ ತಾ.15.08.2020 ರಂದು ನಿಧನ ಹೊಂದಿದರು.

### ಶ್ರೀಮತಿ ಲಕ್ಷ್ಮೀ



ದಿವಂಗತ ಪಿಲಿಂಜ ಶ್ರೀನಿವಾಸರಾವ್‌ರವರ ಪತ್ನಿ ಲಕ್ಷ್ಮೀ 28.08.2020ರಂದು ನಿಧನ ಹೊಂದಿದರು.

**** ****

### ಶ್ರೀಮತಿ ಎಸ್.ಲಲಿತಾ



ಎಚ್.ಸೂರ್ಯ ಪ್ರಕಾಶ ರಾವ್ ನಿವೃತ್ತ ಅಧ್ಯಾಪಕರು ಇವರ ಪತ್ನಿ ಎಸ್. ಲಲಿತಾ (ನಿವೃತ್ತ ಮುಖ್ಯೋಪಾಧ್ಯಾಯಿನಿ) 13.08.2020ರಂದು ವೈಕುಂಠರವರು ಸ್ವಗೃಹದಲ್ಲಿ ನಿಧನರಾದರು.

**** ****

### ಶ್ರೀಮತಿ ಲಲಿತಾ

ಮಂಗಳೂರಿನ ನಿವಾಸಿ ದಿವಂಗತ ಶ್ರೀ ವೆಂಕಟಕೃಷ್ಣ ಇವರ ಪತ್ನಿ ಲಲಿತಾ 31.08.2020 ರಂದು ನಿಧನ ಹೊಂದಿದರು.

**** ****

### ಶ್ರೀ ವೈ.ವಿ.ಕೇಶವರಾವ್

ಬೆಂಗಳೂರು ನಿವಾಸಿ ಶ್ರೀ ವೈ.ವಿ.ಕೇಶವರಾವ್ 18.08.2020 ರಂದು ನಿಧನ ಹೊಂದಿದರು.

**** ****

### ಶ್ರೀಮತಿ ವಿಶಾಲಾಕ್ಷಿ

ದಿವಂಗತ ನಟ್ಟೋಜ ಗಿರಿಧರ್ ರಾವ್ ಇವರ ಪತ್ನಿ ವಿಶಾಲಾಕ್ಷಿ 15.08.2020 ರಂದು ನಿಧನ ಹೊಂದಿದರು.

**** ****

### ಶ್ರೀಮತಿ ಶಾರದಾ ಹರಿದಾಸ ರಾವ್

ಮುಂಬೈ ಮುಳುಂಡ್ ನಿವಾಸಿ ಶ್ರೀಮತಿ ಶಾರದಾ ಹರಿದಾಸ ರಾವ್ 27.08.2020 ರಂದು ನಿಧನ ಹೊಂದಿದರು.

**** ****

### ಶ್ರೀಮತಿ ವಿಜಯಲಕ್ಷ್ಮೀ

ದಿವಂಗತ ಬಪ್ಪನಾಡು ಸೋಮಶೇಖರ್ ರಾವ್‌ರವರ ಪತ್ನಿ ಶ್ರೀಮತಿ ವಿಜಯಲಕ್ಷ್ಮೀ 27.08.2020ರಂದು ನಿಧನ ಹೊಂದಿದರು.

**** ****

### ಶ್ರೀ ಕಿರಣ್

ಮಂಗಳೂರು ಬೈಲಕೆರೆ ಕಿರಣ್ ಇವರು 30.08.2020 ರಂದು ನಿಧನ ಹೊಂದಿದರು.

**** ****

### ಶ್ರೀ ಸುಬ್ರಹ್ಮಣ್ಯ ರಾವ್

ಕಟೀಲು ಶಿತ್ಲ ಮನೆತನದ ಅಜಾರು ಸುಬ್ರಹ್ಮಣ್ಯ ರಾವ್‌ರವರು ತಮ್ಮ 76 ನೇ ವಯಸ್ಸಿನಲ್ಲಿ ತಮ್ಮ ಮಗಳ ಉಜಿರೆಯ ಮನೆಯಲ್ಲಿ ದಿ.31.08.2020 ರಂದು ನಿಧನ ಹೊಂದಿದರು.

## ಶುಭ ಜನನ

ಕಟಪಾಡಿ ಮೂಡಬೆಟ್ಟುಕೆ. ಹರಿದಾಸ್ ರಾವ್ ಮತ್ತು ಭಾರ್ಗವಿ ಅವರ ಪುತ್ರ ಆದರ್ಶ ಕುಮಾರ್ ಮತ್ತು ಅರ್ಚನ ರಾವ್ ದಂಪತಿಗಳಿಗೆ ದಿನಾಂಕ 08-09-2020ರಂದು ಗಂಡು ಮಗುವಿನ ಜನನ.

## ಶುಭ ವಿವಾಹ

ಬಾರಕೂರಿನ ಶ್ರೀ ರಾಮಚಂದ್ರ ರಾವ್ ಹಾಗೂ ಶ್ರೀಮತಿ ರತ್ನಮಾಲಾರವರ ಪುತ್ರ **ರಂಜನ್ ಕುಮಾರ್** ಹಾಗೂ ಕುಂಜಾರುಗಿರಿ ಅರುಣ್ ರಾವ್ ಹಾಗೂ ಶ್ರೀಮತಿ ಸುಶೀಲಾ ಇವರ ಪುತ್ರಿ **ಅಶ್ವಿತಾ**ರವರ ವಿವಾಹವು 24.05.2020ರಂದು ಪೆರ್ಡೂರಿನಲ್ಲಿ ನೆರವೇರಿತು.

**** ****

ಮಂಗಳೂರಿನ ಶ್ರೀ ಐ.ಪಿ.ನಾಗರಾಜ ರಾವ್ ಹಾಗೂ ಶ್ರೀಮತಿ ಭುವನೇಶ್ವರಿ ಇವರ ಪುತ್ರಿ **ಸುಷ್ಮಾ** ಹಾಗೂ ಪುತ್ತೂರಿನ ಶ್ರೀ ಲಕ್ಷ್ಮೀನಾರಾಯಣ ಬೈಪಡಿತ್ತಾಯ ಹಾಗೂ ಶ್ರೀಮತಿ ಕಮಲ ಇವರ ಪುತ್ರ **ಸಂದೇಶ್**ರವರ ವಿವಾಹವು ಶಕ್ತಿನಗರದ ಗೋಪಾಲಕೃಷ್ಣ ದೇವಸ್ಥಾನದ ಸುಮನಸ ಸಭಾಂಗಣದಲ್ಲಿ ತಾ.31.8.2020ರಂದು ನೆರವೇರಿತು.

## ಶ್ರೀ ಶಾರದಾ ಮಂಟಪದ ಊಟದ ಕೊಠಡಿ ನವೀಕರಣಕ್ಕೆ ದೇಣಿಗೆ ನೀಡಿದವರು

| | | |
|---|---|---|
| 1 | ಶ್ರೀಮತಿ ಸುನಂದ ಸಿ.ಎಸ್ ರಾವ್, ಚಿಟ್ಪಾಡಿ | 31,111.00 |
| 2 | ಕೆ.ಆನಂದ ರಾವ್ ಸ್ಮರಣಾರ್ಥ ಕೆ.ವೆಂಕಟ್ ರಾವ್ ಮತ್ತು ಕೆ.ಉಮೇಶ್ ರಾವ್, ಮೂಡಬೆಟ್ಟು | 30,000.00 |
| 3 | ವಾಗೀಶ ಶಾಸ್ತ್ರಿ ಎಸ್., ಉಡುಪಿ | 30,000.00 |
| 4 | ಡಾ|ಪಿ.ಜಿ.ರಾವ್, ಮಾರ್ಪಳ್ಳಿ | 30,000.00 |
| 5 | ಕೆ.ಶಿವರಾವ್, ಕಟ್ಪಾಡಿ | 30,000.00 |
| 6 | ಉಚ್ಚಿಲ ವಸಂತ್ ರಾವ್ | 25,001.00 |
| 7 | ಶ್ರೀಮತಿ. ಯು.ಪುಷ್ಪಲತಾ ಜೆ.ರಾವ್ | 25,000.00 |
| 8 | ಎನ್.ಪದ್ಮನಾಭ ರಾವ್, ಬೆಂಗಳೂರು | 15,000.00 |
| 9 | ಶೆಡ್ಡೆ ಜಗದೀಶ್ ರಾವ್ | 12,000.00 |
| 10 | ಬೆಳ್ಳೆ ಶ್ರೀನಿವಾಸ ರಾವ್, ಮುಂಬೈ | 11,000.00 |
| 11 | ಶ್ರೀನಿವಾಸ ವಾದಿರಾಜ ಶ್ಯಾನುಭಾಗ್ | 11,000.00 |
| 12 | ಪರಶುರಾಮ್ ರಂಗ ರಾವ್ | 10,100.00 |
| 13 | ಬಿ.ಆರ್.ರಾವ್, ಸಿಕಂದರಾಬಾದ್ | 10,000.00 |
| 14 | ಭಾಸ್ಕರ್ ರಾವ್ ಕೋಲ್ಪೆ, ಬೆಂಗಳೂರು | 10,000.00 |
| 15 | ದಿ| ಕೆ.ಸುಬ್ರಹ್ಮಣ್ಯ ರಾವ್ ಸ್ಮರಣೀಯ ಕೆ.ರಘುರಾಮ್ ರಾವ್, ಕುಕ್ಕಿಕಟ್ಟೆ | 10,000.00 |
| 16 | ಶ್ರೀ ವಿಜಯಕುಮಾರ್ ರಾವ್.ಬಿ, ಬೆಂಗಳೂರು | 10,000.00 |
| 17 | ಕೆ.ರಾಧಾಕೃಷ್ಣ, ಮೂಡಿಗೆರೆ | 10,000.00 |
| 18 | ಶ್ರೀಮತಿ ಸೀತಾರತ್ನ.ಪಿ, ನಕ್ರೆ | 5,000.00 |
| | ಒಟ್ಟು | 3,15,212.00 |


ಶ್ರೀಮತಿ ಮತ್ತು ಶ್ರೀ ಉದಯಚಂದ್ರ ರಾವ್ ನಂದಳಿಕೆ
**ಯಶಸ್ವೀ ಎಂಟರ್‌ಪ್ರೈಸೆಸ್**
ಶಾಂಭವಿ ಹೈಟ್ಸ್, ಸೈಂಟ್‌ಮೇರಿಸ್ ಕಾಲೇಜು ಎದುರು, ಮುಖ್ಯರಸ್ತೆ, ಶಿರ್ವ - 574 116.
ಇ-ಮೇಲ್ : udayarao42@gmail.com
Z Gift Item Z Stationary Z Xerox Z Lamination
Z Spiral Binding Z Mobile & DTC Recharge Z Tours & Travels
Z Courier Service Z Sports Items & Toys Z Ice Creams





**RAJESH POWER PRESS**
PRINTERS & PUBLISHERS
DARBE, PUTTUR, DA. KA. - 574 202.
KARNATAKA STATE, SOUTH INDIA.
Ph : (08251) 231696, 231697 & 322386
E-mail : msraghunathrao@hotmail.com
QUALITY FIRST AND ALWAYS









Buying and selling shares
as easy as checking your emails
Sharekhan Online Trading Account Features:
⇨ Your bank account gets directly linked to trading account
⇨ Can do direct fund transfer from any of 11 leading banks
⇨ Choose your trading account, Classic, FastTrade, TradeTiger
⇨ Apply online for Stocks, Mutual Funds and IPO's
Contact : Pradeep Rao K.
Tel : 0824 2412903, 9448191028
Navadurga Share Services
Email : navdurga@bp.sharekhan.com
Sharekhan
YOUR GUIDE TO THE FINANCIAL JUNGLE
Visit : www.sharekhan.com
Sharekhan Ltd.: BSE Cash-INB011073351; F&O-INF011073351; CD-INE011073351; NSE - INB/ INF231073330; CD - INE231073330; MCX Stock Exchange : CD - INE261073330 DP: NSDL-IN-DP-NSDL-233-2003, CDSL-IN-DP-CDSL- 271-2004, PMS INP000000662; Mutual Fund: ARN 20669. Sharekhan Commodities Pvt.Ltd.: MCX- 10080(MCX/TCL/CORP/0425); NCDEX -00132; (NCDEX/TCM/CORP/0142); for any complaints email at igc@sharekhan.com. Regd Add:- A-206, Phoenix House, Phoenix Mills Compound, Senapati Bapat Marg, Lower Parel, Mumbai- 400013.Investing in equities & commodities future involves risk. Please carefully read the risk disclosure document as prescribed by SEBI & relevant exchanges and Do's & Don'ts by NCDEX. (Subbroker Regn.Nos: BSE: INS010606122;NSE: INS23106924)




Ph : 98459 92859
**Ganesh Hebbar & Associates**
CHARTERED ACCOUNTANT
S.M.S.P. Complex, Udupi - 576 101.




**ದೇವಿಕೃಪಾ ಏಜೆನ್ಸೀಸ್, ನಂದಿಕೂರು**
ಫೋನ್ : 2556536 (R), 2555466 (O), Mobile : 9845149521
ಶಾಂತಲಾ 100 ಅಗರ್ ಬತ್ತಿಯ ಮುಖ್ಯ ವಿತರಣೆಗಾರರು ಹಾಗೂ ಕರ್ಪೂರ, ಲೋಬಾನ ಮುಂತಾದವುಗಳ ರಖಂ ವ್ಯಾಪಾರಸ್ಥರು.
ಪ್ರೊ| ಎಸ್. ಜನಾರ್ದನ್ ರಾವ್
ದೇವಿಕೃಪಾ, ನಂದಿಕೂರು, ಉಡುಪಿ ತಾಲೂಕು



ಬಳಸಿದ ಕಾರುಗಳ ಮಾರಾಟ ಮತ್ತು ಖರೀದಿಗಾಗಿ ನಮ್ಮನ್ನು ಸಂಪರ್ಕಿಸಿ :
ಸೂಕ್ತ ಬೆಲೆಯೊಂದಿಗೆ ಉತ್ತಮ ಸೇವೆ ಲಭ್ಯ.

**N. Laxmi Prasad**

ಕಾರ್ಯಕಾರಿಣಿ ಮಂಡಳಿ ಸದಸ್ಯರು
D. K. District Used Vehicle Dealers & Agents Association (R.), Mangalore
Flat No. 103, Deepa Residency, Near Preethi Apartment
Kodiyalguttu West, Kodiyalbail, MANGALORE - 575 003
Mob. : 9845644489, 9964236997 E-mail : laxmiprasad5010@gmail.com




ಎಮ್. ದೇವಾನಂದ್ ಭಟ್ Cell : 9845644556
**ಶೋಭಾ ಡಿಜಿಟಲ್**
ಸ್ಟುಡಿಯೋ & ವೀಡಿಯೊ

ಬೆಳ್ವಾಯಿ-574213 (08258)-276177 (O)
ಮೂಡಬಿದ್ರಿ ಲಾವಂತ ಕಾಂಪ್ಲೆಕ್ಸ್ 9901995655

## ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.)

ಶ್ರೀ ಶಾರದಾ ಮಂಟಪ, ಶ್ರೀ ಶಾರದಾ ನಗರ, ಕುಂಜಿಬೆಟ್ಟು, ಉಡುಪಿ - 576 102.

### ವಿದ್ಯಾರ್ಥಿವೇತನಕ್ಕೆ ಅರ್ಜಿ ಆಹ್ವಾನ 2020-2021

ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳ ಪದವಿಪೂರ್ವ, ಪದವಿ, ಸ್ನಾತಕೋತ್ತರ, ಡಿ.ಎಡ್, ಬಿ.ಎಡ್, ಡಿಪ್ಲೋಮಾ, ಇಂಜೆನಿಯರಿಂಗ್, ವೈದ್ಯಕೀಯ, ವೇದ ತರಗತಿಗಳಲ್ಲಿ ಕಲಿಯುತ್ತಿರುವ, ಹೆತ್ತವರ ವಾರ್ಷಿಕ ಆದಾಯವು ರೂ.3,00,000ಕ್ಕೆ ಮೀರದ ವಿದ್ಯಾರ್ಥಿಗಳಿಂದ ವಿದ್ಯಾರ್ಥಿವೇತನಕ್ಕೆ ಅರ್ಜಿಯನ್ನು ಆಹ್ವಾನಿಸಲಾಗಿದೆ. ಹಿಂದಿನ ತರಗತಿಯ ಅಂಕಪಟ್ಟಿಯ ಪ್ರತಿ, ಪ್ರಸ್ತುತ ವರ್ಷದ ಶಾಲೆಯಿಂದ ವ್ಯಾಸಂಗ ಪ್ರಮಾಣ ಪತ್ರ, ಮತ್ತು ಬ್ಯಾಂಕಿನ ಖಾತೆಯ ವಿವರ ಸಹಿತ ಶ್ರೀ ಶಾರದಾ ಮಂಟಪದಲ್ಲಿ ಲಭ್ಯವಿರುವ ನಿಗದಿತ ಅರ್ಜಿ ಫಾರಂನಲ್ಲಿ ತಾ.30-09-2020ರ ಒಳಗೆ ಶ್ರೀ ಶಾರದಾ ಮಂಟಪ, ಶ್ರೀ ಶಾರದಾನಗರ, ಕುಂಜಿಬೆಟ್ಟು, ಉಡುಪಿ-576102 ಅರ್ಜಿಯನ್ನು ಕಳುಹಿಸಿ ಕೊಡಬೇಕು.

- ಅಧ್ಯಕ್ಷರು, ವಿದ್ಯಾರ್ಥಿವೇತನ, ಶಿಕ್ಷಣ ಮತ್ತು ತರಬೇತಿ ವೇದಿಕೆ,

### ಡಾ। ದಯಾನಂದ ಎಸ್. ರಾವ್ ಟ್ರಸ್ಟ್-ಸಾಲ ವಿದ್ಯಾರ್ಥಿ ವೇತನಕ್ಕೆ ಅರ್ಜಿ ಆಹ್ವಾನ

**2020-2021**

ಡಾ। ದಯಾನಂದ ಎಸ್. ರಾವ್ ಎಜ್ಯುಕೇಶನ್ ಟ್ರಸ್ಟ್, ಬೆಂಗಳೂರು, ಇವರು ‘‘ರತ್ನಾಬಾಯಿ ಸ್ಮಾರಕ ಸಾಲ ವಿದ್ಯಾರ್ಥಿವೇತನ’’ಕ್ಕಾಗಿ ಉಡುಪಿ ಕುಂಜಿಬೆಟ್ಟಿನ ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.)ಕ್ಕೆ ಸಾಲ ವಿದ್ಯಾರ್ಥಿವೇತನ ನೀಡಲು ನಗದು ಹಣವನ್ನು ಒದಗಿಸಿದ್ದಾರೆ. ಈ ಮೊಬಲಗನ್ನು ಟ್ರಸ್ಟ್‌ನ ನಿಬಂಧನೆಯಂತೆ ಕಲಿಕೆ ಸಮಯದಲ್ಲಿ ಬಡ್ಡಿ ರಹಿತ ಸಾಲ ರೂಪದಲ್ಲಿ ವಿದ್ಯಾರ್ಥಿಗಳಿಗೆ ನೀಡಲಾಗುವುದು. **2020-2021**ನೇ ಶೈಕ್ಷಣಿಕ ಸಾಲಿನಲ್ಲಿ ವೃತ್ತಿಪರ ತರಗತಿಗಳಿಗೆ ಸೇರಿದ **ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ** ಇಂಜಿನಿಯರಿಂಗ್, ಮೆಡಿಕಲ್, ಇತ್ಯಾದಿ ತರಗತಿಗಳ ವಿದ್ಯಾರ್ಥಿಗಳಿಗೆ ಈ ಸಾಲ ವಿದ್ಯಾರ್ಥಿವೇತನವನ್ನು ನೀಡಲಾಗುವುದು. **ಅವರ ಅಗತ್ಯತೆ, ಆರ್ಥಿಕ ಸ್ಥಿತಿಗತಿ ಮತ್ತು ಪ್ರತಿಭೆಯನ್ನಾಧರಿಸಿ ಸಾಲ ಮಂಜೂರು ಮಾಡಲಾಗುವುದು.** ಸಾಲ ವಿದ್ಯಾರ್ಥಿ ವೇತನವನ್ನು ವಿದ್ಯಾರ್ಥಿಯ ಮುಂದಿನ ವರ್ಷಗಳ ಪ್ರಗತಿಯನ್ನು ಪರಿಶೀಲಿಸಿ ಪೂರ್ಣ ಅಧ್ಯಯನ ಅವಧಿಯಲ್ಲಿ ಮುಂದುವರಿಸಲಾಗುವುದು.

ಸಾಲ ವಿದ್ಯಾರ್ಥಿವೇತನವನ್ನು ಪಡೆಯಲು ಆಸಕ್ತಿಯುಳ್ಳ ವಿದ್ಯಾರ್ಥಿಗಳು **ಕೈಬರಹದಲ್ಲಿ ಅರ್ಜಿ ಫಾರಂ ಬರೆದು ಪೋಷಕರ ಸಹಿಯೊಂದಿಗೆ,** ಪರೀಕ್ಷೆಯ ಅಂಕಪಟ್ಟಿ ಹಾಗೂ ವ್ಯಾಸಂಗ ಪ್ರಮಾಣ ಪತ್ರ, ಬ್ಯಾಂಕ್ ಖಾತೆಯ ವಿವರಗಳೊಂದಿಗೆ ಈ ಕೆಳಗಿನ ವಿಳಾಸಕ್ಕೆ **ತಾ.30-09-2020**ರ ಒಳಗೆ ತಲಪುವಂತೆ ಕಳುಹಿಸಬೇಕು.

**ವಿ.ಸೂ. : ಕಳೆದ ಸಾಲಿನಲ್ಲಿ ಸಾಲ ವಿದ್ಯಾರ್ಥಿ ವೇತನ ಪಡೆದುಕೊಂಡ ಅಭ್ಯರ್ಥಿಗಳೂ ನವೀಕರಣಕ್ಕಾಗಿ ಕಳೆದ ಸಾಲಿನ ತಮ್ಮ ವ್ಯಾಸಂಗದ ಪ್ರಗತಿಯ ವಿವರ ಹಾಗೂ ಪ್ರಸಕ್ತ ಸಾಲಿನ ವ್ಯಾಸಂಗ ಪ್ರಮಾಣ ಪತ್ರದ ಜೊತೆಗೆ ಅರ್ಜಿ ಸಲ್ಲಿಸಬೇಕು. ವ್ಯಾಸಂಗ ಪೂರೈಸಿದ ವಿದ್ಯಾರ್ಥಿಗಳು ಮರುಪಾವತಿಸುವ ಬಗ್ಗೆ ಶ್ರೀ ಶಾರದಾ ಕ್ರೆಡಿಟ್ ಕೋ-ಅಪರೇಟಿವ್ ಸೊಸೈಟಿ (ಫೋನ್ : 0820-2522408)ಯಲ್ಲಿ ವಿಚಾರಿಸಬಹುದು.**

**-ಅಧ್ಯಕ್ಷರು, ವಿದ್ಯಾರ್ಥಿ ವೇತನ, ಶಿಕ್ಷಣ ಮತ್ತು ತರಬೇತಿ ವೇದಿಕೆ,**

### ಅಂಬಲ್ಪಾಡಿ ಕೃಷ್ಣ ರಾವ್ ಸ್ಮಾರಕ ವಿದ್ಯಾರ್ಥಿ ಪುರಸ್ಕಾರ 2020-2021

**ಉಡುಪಿ ಮತ್ತು ದ.ಕ. ಜಿಲ್ಲೆಗಳ** ವಿಶ್ವವಿದ್ಯಾಲಯದಲ್ಲಿ ಕಲಿಯುವ ಸ್ನಾತಕೋತ್ತರ ಪದವಿಯಲ್ಲಿ ಎಲ್ಲಾ ವಿಷಯಗಳಲ್ಲಿ ರ್‍ಯಾಂಕ್ ಗಳಿಸಿದ ನಮ್ಮ ಸಮಾಜದ ಅರ್ಹ ವಿದ್ಯಾರ್ಥಿಗಳಿಗೆ ಪುರಸ್ಕಾರ ನೀಡಲಾಗುವುದು. ವಿದ್ಯಾರ್ಥಿಗಳು ತಮ್ಮ ಅರ್ಜಿಯನ್ನು ಬಿಳಿ ಹಾಳೆಯಲ್ಲಿ ಬರೆದು, ಅದರೊಟ್ಟಿಗೆ ರ್‍ಯಾಂಕ್ ಸಿಕ್ಕಿದ ಬಗ್ಗೆ ಸೂಕ್ತ ವಿವರ, ಬ್ಯಾಂಕ್ ಖಾತೆಯ ವಿವರಗಳೊಂದಿಗೆ **ತಾ.30-09-2020**ರೊಳಗೆ **ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.), ಶ್ರೀ ಶಾರದಾ ಮಂಟಪ, ಶ್ರೀ ಶಾರದಾ ನಗರ, ಕುಂಜಿಬೆಟ್ಟು, ಉಡುಪಿ** ಇಲ್ಲಿಗೆ ಕಳುಹಿಸಬೇಕಾಗಿ ವಿನಂತಿ.

- ಅಧ್ಯಕ್ಷರು, ವಿದ್ಯಾರ್ಥಿವೇತನ, ಶಿಕ್ಷಣ ಮತ್ತು ತರಬೇತಿ ವೇದಿಕೆ,

### ಉದಯಚಂದ್ರ ಪ್ರತಿಭಾ ಪುರಸ್ಕಾರ 2020-2021

ಸಂಘದ ಯುವವೇದಿಕೆಯ ಆಶ್ರಯದಲ್ಲಿ **ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳ** ನಮ್ಮ ಸಮಾಜದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಉದಯಚಂದ್ರ ಪ್ರತಿಭಾ ಪುರಸ್ಕಾರ ನೀಡಲಾಗುವುದು. **2019-20**ನೇ ಸಾಲಿನಲ್ಲಿ ಎಸ್.ಎಸ್.ಎಲ್.ಸಿ. ಮತ್ತು ಪದವಿಪೂರ್ವ ಮೂರು ವಿಭಾಗಗಳಲ್ಲಿ ಅಂತಿಮ ಪರೀಕ್ಷೆಗಳಲ್ಲಿ ಅತಿ ಹೆಚ್ಚು ಅಂಕ ಗಳಿಸಿದ ಒಬ್ಬೊಬ್ಬ ವಿದ್ಯಾರ್ಥಿಗಳಿಗೆ ಪುರಸ್ಕಾರ ನೀಡಲಾಗುವುದು. ವಿದ್ಯಾರ್ಥಿಗಳು ಅಂಕಪಟ್ಟಿಯ ಪ್ರತಿ, ವಿಳಾಸ, ಫೋನ್ ನಂಬ್ರ, ಬ್ಯಾಂಕ್ ಖಾತೆಯ ವಿವರಗಳೊಂದಿಗೆ ಅರ್ಜಿಯನ್ನು **ಅಧ್ಯಕ್ಷರು, ಯುವವೇದಿಕೆ, ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.), ಶ್ರೀ ಶಾರದಾ ಮಂಟಪ, ಶ್ರೀ ಶಾರದಾ ನಗರ, ಕುಂಜಿಬೆಟ್ಟು ಉಡುಪಿ - 576 102** ಇಲ್ಲಿಗೆ **ತಾ.30-09-2020**ರೊಳಗೆ ಕಳುಹಿಸಿ ಕೊಡಬೇಕು.

- ಅಧ್ಯಕ್ಷರು, ಯುವ ಮತ್ತು ಕ್ರೀಡಾ ವೇದಿಕೆ.

SAMPATH KUMAR Mobile : 9741508881

**TRISHULINI TOURIST**

*The Tourist People*

Near Mahishamardhini Temple, Bailur, Udupi.

ALL TYPES OF VEHICLES AVAILABLE FOR HIRE

*With Best Complimemts From*

SRI M. SHAILESH RAO Ph : 9448624324

B.E., Civil

**Civil Engineer & Contractor**

**SRI MALAVIKA ASSOCIATES**

KALSANKA-UDUPI ROAD, UDUPI.

**Website : shreemaalavikaassociates.com**

## ದಿ। ಕೆಡೆಂಜಿ ಭಾಗೀರಥಿ ದಾಮೋದರ ಶಾಸ್ತ್ರಿ ಪ್ರತಿಷ್ಠಾನ ಕುಳಾಯಿ

ಕೋಂ.ಕೆ. ಸದಾಶಿವ ಶಾಸ್ತ್ರಿ, 3-68(7), ಶ್ರೀ ವಿಷ್ಣುಮೂರ್ತಿ ದೇವಸ್ಥಾನ ರಸ್ತೆ, ಕುಳಾಯಿ-575019. ಮೊ : 8762235801.

### ಪ್ರತಿಭಾ ಪುರಸ್ಕಾರ

2019-2020 ಸಾಲಿನ ಶೈಕ್ಷಣಿಕ ವರ್ಷದ ಎಸ್.ಎಸ್.ಎಲ್.ಸಿ ಹಾಗೂ ದ್ವಿತೀಯ ಪದವಿ ಪೂರ್ವ (ಪಿ.ಯು.ಸಿ) ಪರೀಕ್ಷೆಯಲ್ಲಿ 85%ಕ್ಕೂ ಹೆಚ್ಚು (ವಿಶಿಷ್ಟ ಶ್ರೇಣಿ) ಅಂಕ ಗಳಿಸಿ ತೇರ್ಗಡೆಯಾದ ವಿದ್ಯಾರ್ಥಿ/ವಿದ್ಯಾರ್ಥಿನಿಯರನ್ನು, ಶ್ರೀ ಸುಬ್ರಹ್ಮಣ್ಯ ಸಭಾ, ಬಿಜೈ ರಸ್ತೆ ಕರಂಗಲ್ಪಾಡಿ, ಮಂಗಳೂರು ಇಲ್ಲಿ ಮುಂಬರುವ ದಿನಗಳಲ್ಲಿ ನಡೆಯುವ ನಾಡ ಹಬ್ಬದಂದು ಮೇಲೆ ತಿಳಿಸಿದ ಪ್ರತಿಷ್ಠಾನದ ವತಿಯಿಂದ ಅಭಿನಂದಿಸಲಾಗುವುದು. ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಯ ಅರ್ಹ ಆಸಕ್ತ ವಿದ್ಯಾರ್ಥಿ/ವಿದ್ಯಾರ್ಥಿನಿಯರು ತಮ್ಮ ಅಂಕ ಪಟ್ಟಿಯ ಯಥಾ ನಕಲು, ವಿಳಾಸ, ದೂರವಾಣಿ ಸಂಖ್ಯೆ, ಪಾಸ್‌ಪೋರ್ಟ್ ಅಳತೆಯ ಭಾವಚಿತ್ರ ಇತ್ಯಾದಿಗಳನ್ನು **ದಿನಾಂಕ 15.10.2020**ರ ಒಳಗಾಗಿ ಮೇಲ್ಕಾಣಿಸಿದ ಪ್ರತಿಷ್ಠಾನದ ವಿಳಾಸಕ್ಕೆ ತಲುಪಿಸಲು ಕೋರಲಾಗಿದೆ.

-ಕೆ. ಸದಾಶಿವ ಶಾಸ್ತ್ರೀ, 876223580

## ಶ್ರೀ ಶಾರದಾ ದೇವಸ್ಥಾನ, ಶ್ರೀ ಶಾರದಾನಗರ, ಕುಂಜಿಬೆಟ್ಟು, ಉಡುಪಿ

### ಈ ತಿಂಗಳ ಕಾರ್ಯಕ್ರಮಗಳು

**(ದರ್ಶನದ ಸಮಯ ಬೆಳಿಗ್ಗೆ 8-00ರಿಂದ 12-00, ಸಂಜೆ 3-30ರಿಂದ 8-00)**

ಮಂಗಳಾರತಿ : ಪ್ರತಿ ದಿನ ಬೆಳಿಗ್ಗೆ 8-00, ಮಧ್ಯಾಹ್ನ 12-00 ಹಾಗೂ ರಾತ್ರಿ 7-30ಕ್ಕೆ

ಪ್ರತಿ ಮಂಗಳವಾರ : **ಸೌಂದರ್ಯಲಹರಿ ಪಾರಾಯಣ** ಸಂಜೆ 5ರಿಂದ } ಮಹಿಳಾ

ಪ್ರತಿ ಶುಕ್ರವಾರ : **ಲಲಿತಾ ಸಹಸ್ರನಾಮ ಮತ್ತು ದೇವರ ಭಜನೆ** ಸಂಜೆ 5ರಿಂದ } ವೇದಿಕೆಯಿಂದ

ಪ್ರತಿ ಆದಿತ್ಯವಾರ : ಸ್ವಾಧ್ಯಾಯ ಸಮಿತಿಯವರಿಂದ ‘‘**ಪಾರಾಯಣ**’’ ಸಂಜೆ ಗಂಟೆ 4-30ರಿಂದ

**ತಾ.05-10-2020 ಸಂಕಷ್ಟಹರ ಚತುರ್ಥಿಯಂದು ‘‘ಸಾಮೂಹಿಕ ಗಣಹೋಮ’’ ಬೆಳಿಗ್ಗೆ ಗಂಟೆ 10-00ರಿಂದ (ಸೇವಾ ಶುಲ್ಕ ರೂ.51/-)**

**ತಾ.24-09-2020 ಮೂಲಾ ನಕ್ಷತ್ರದ ದಿನದಂದು ಶ್ರೀದೇವಿಗೆ ಸಹಸ್ರನಾಮಾರ್ಚನೆ (ಸಮಯ ಸಂಜೆ 5-00ರಿಂದ 6-00ರ ವರೆಗೆ)**

**ತಾ.21-09-2020, ಮತ್ತು ತಾ.07-10-2020 ಪಂಚಮಿಯಂದು ‘‘ನಾಗದೇವರಿಗೆ ತನುಸೇವೆ’’ ಬೆಳಿಗ್ಗೆ 9-00ರಿಂದ ಮಧ್ಯಾಹ್ನ 12-00 ಗಂಟೆಯ ತನಕ**

**ಭಕ್ತಾದಿಗಳೆಲ್ಲರಿಗೂ ಆದರದ ಸ್ವಾಗತ**

### ಅಕ್ಟೋಬರ್ ತಿಂಗಳ ಶಾಶ್ವತ ಸೇವಾಕರ್ತರ ವಿವರ

1. ಶ್ರೀ ಕುಮಾರ್ ಬೆಳ್ಳೆ, ಮುಂಬೈ
2. ಶ್ರೀಮತಿ ಬಿ.ಸ್ವಾತಿ ರಾವ್, ಬೆಂಗಳೂರು
3. ಶ್ರೀಮತಿ ಶೈಲಾ ಸಿ.ಆರ್. ಬೆಳ್ಳೆ, ಮುಂಬೈ
4. ಶ್ರೀ ದತ್ತಾತ್ರೇಯ ಮತ್ತು ಶ್ರೀಮತಿ ವಿಜಯಲಕ್ಷ್ಮೀ, ಉಳಿಯಾರಗೋಳಿ, ಕಾಪು
5. ಶ್ರೀ ಬಿ.ಕೃಷ್ಣಮೂರ್ತಿ ರಾವ್, ಅಂಬಲಪಾಡಿ
6. ಶ್ರೀ ನಾಗೇಶ್ ಕೃಷ್ಣಪ್ಪ ಸುವರ್ಣ, ಮಂಗಳೂರು
7. ಶ್ರೀಮತಿ ಸರಳ ನಾಗೇಶ್.ಕೆ. ಸುವರ್ಣ, ಮಂಗಳೂರು
8. ಶ್ರೀ ಎಚ್.ಟಿ. ಶಂಕರ್ ರಾವ್, ಬಜಗೋಳಿ
9. ಶ್ರೀಮತಿ ಸ್ಮಿತಾ ಕಾಮತ್, ಕಾರ್ಕಳ
10. ಶ್ರೀ ಎನ್.ಎ.ಪಿ ಭಟ್, ಬನ್ನಂಜೆ
11. ಶ್ರೀಮತಿ ಪ್ರೀತಿ ಪಿ. ಕಾಮತ್, ಮಂಗಳೂರು
12. ಶ್ರೀ ವೈ.ಭುವನೇಂದ್ರ ರಾವ್, ಕೊರಂಗ್ರಪಾಡಿ
13. ಶ್ರೀ ಬಿ.ಅನಿಲ್ ಕುಮಾರ್ ರಾವ್, ಉಡುಪಿ
14. ಶ್ರೀಮತಿ ಶೇಷಮ್ಮ, ಮೂಡು ಅಲೆವೂರು
15. ಶ್ರೀ ಕೆ. ಸದಾಶಿವ ಉಪಧ್ಯಾಯ, ಕಟೀಲ್
16. ಶ್ರೀ ಪಿ. ವೆಂಕಟ ರಾವ್, ಬೆಂಗಳೂರು
17. ನಿಖಿತಾ ಆರ್. ಪೇಜಾವರ್, ಮಂಗಳೂರು
18. ಶ್ರೀ ಗೋಪಾಲ್ ರಾವ್, ಉದ್ಯಾವರ, ಬೆಂಗಳೂರು
19. ಶ್ರೀಮತಿ ವಸುಮತಿ ಕಿಶೋರ್ ಕುಮಾರ್, ಮುಂಬೈ
20. ಶ್ರೀಮತಿ ಟಿ. ಮಹಾಲಕ್ಷ್ಮೀ, ಮಂಗಳೂರು
21. ಶ್ರೀಮತಿ ಅಶ್ವಿನಿ ಸಂಜಯ್, ಮಂಗಳೂರು
22. ಶ್ರೀ ಎಚ್. ನಿರಂಜನ್ ಭಟ್, ಉಡುಪಿ
23. ಶ್ರೀಮತಿ ಶಾಂತಿ.ಜೆ. ನಾಯಕ್, ಪಟ್ಲ
24. ಶ್ರೀಮತಿ ಎ. ರಘುಪತಿ ರಾವ್, ಮುಂಬೈ
25. ಮಿಸ್ಟರ್ ಗೌತಮ್, ಬಾಗಲಕೋಟೆ
26. ಶ್ರೀಮತಿ ಭಾಗ್ಯಶ್ರೀ ಜೀವನ್ ಪ್ರಕಾಶ್, ಹೆರ್ಗ
27. ಶ್ರೀ ಮಹೇಶ್ ಮತ್ತು ಶ್ರೀಮತಿ ಜಯಶ್ರೀ, ಸಾಂಗ್ಲಿ
28. ಸ್ನೇಹ, ಬಾರಕೂರು
29. ಶ್ರೀ ನಂದಳಿಕೆ ಚಂದ್ರಶೇಖರ್ ರಾವ್, ನಂದಳಿಕೆ
30 ಶ್ರೀಮತಿ ಜಯಂತ್ ನಾಯಕ್, ಪಟ್ಲ
31. ಶ್ರೀ ಕೃಷ್ಣ ಪೈ, ಮುಂಬೈ
32. ಡಾ.ಪಿ. ವಿಠಲ ರಾವ್, ಮಣಿಪಾಲ್
33. ಶ್ರೀ ಎಮ್. ಕೃಷ್ಣಕುಮಾರ್, ಕಟ್ಪಾಡಿ
34. ಶ್ರೀ ಪ್ರಸಾದ್, ಹಳೆಯಂಗಡಿ
35. ಶ್ರೀಮತಿ ಕ್ಷಮಾ, ಮುಂಬೈ
36. ಶ್ರೀ ಬಿ. ರವೀಂದ್ರನಾಥ್ ರಾವ್, ಬೆಂಗಳೂರು
37. ಶ್ರೀ ಎನ್.ಡಿ, ಜಗನ್ನಾಥ ರಾವ್, ಬೆಂಗಳೂರು

### ಕನ್ಯಾ ಮಾಸದ ವಿಶೇಷ ದಿನಗಳು

| | |
|---|---|
| 16-09-2020 | ಕನ್ಯಾ ಸಂಕ್ರಮಣ |
| 17-09-2020 | ಮಹಾಲಯ ಅಮಾವಾಸ್ಯೆ |
| 18-09-2020 | ಶರದೃತು, ಅಧಿಕ ಅಶ್ವಯುಜ ಮಾಸದ ಶುಕ್ಲಪಕ್ಷಾರಂಭ |
| 27-09-2020 | ಸರ್ವೈಕಾದಶಿ |
| 01-10-2020 | ಹುಣ್ಣಿಮೆ |
| 02-10-2020 | ಶರದೃತು, ಅಧಿಕ ಅಶ್ವಯುಜ ಮಾಸದ ಕೃಷ್ಣಪಕ್ಷಾರಂಭ |
| 05-10-2020 | ಸಂಕಷ್ಟಹರ ಚತುರ್ಥಿ, ಚಂದ್ರೋದಯ ರಾತ್ರಿ 8.43 |
| 13-10-2020 | ಸರ್ವೈಕಾದಶಿ |
| 16-10-2020 | ಅಮಾವಾಸ್ಯೆ |
| 17-10-2020 | ಶರದೃತು, ನಿಜ ಅಶ್ವಯುಜ ಮಾಸದ ಶುಕ್ಲಪಕ್ಷಾರಂಭ - ಶರನ್ನವರಾತ್ರಿ ಆರಂಭ ಶ್ರೀಶಾರದಾ ದೇವಸ್ಥಾನದಲ್ಲಿ ನವರಾತ್ರಿ ಪೂಜೆ ಹಾಗೂ ದುರ್ಗಾನಮಸ್ಕಾರ ಪೂಜೆ ಆರಂಭ ತುಲಾ ಸಂಕ್ರಮಣ |
| 25-10-2020 | ಶ್ರೀಶಾರದಾ ಮಂಟಪದಲ್ಲಿ ವಿಜಯದಶಮಿ ಚಂಡಿಕಾಹೋಮ |

ಶುಭಾಶಯಗಳೊಂದಿಗೆ

**ಹೆಬ್ಬಾರ್ ಎಂಟರ್‌ಪ್ರೈಸಸ್**

ವೈಷ್ಣವಿ ಬಿಲ್ಡಿಂಗ್, ವಾದಿರಾಜ ರಸ್ತೆ, ಉಡುಪಿ-576101.

ನಮ್ಮಲ್ಲಿ ಶುಭ ಸಮಾರಂಭಗಳಿಗೆ ಬೇಕಾಗುವ ಶಾಮಿಯಾನ, ಕುರ್ಚಿ, ಟೇಬಲ್, ಪಾತ್ರೆ, ಅಡುಗೆ ಹಾಗೂ ಕ್ಯಾಟರಿಂಗ್ ವ್ಯವಸ್ಥೆ ಲಭ್ಯವಿದೆ.

ಪ್ರೊ : ಮಂಜುನಾಥ ಹೆಬ್ಬಾರ್ ಸಂಪರ್ಕ ಸಂಖ್ಯೆ 9611099894



## ನಿಧಿ ರಾವ್

ಮಂಗಳೂರಿನ ಶ್ರೀ ಜಯಚಂದ್ರ ಹಾಗೂ ಶ್ರೀಮತಿ ಸ್ವಪ್ನ ಇವರ ಪುತ್ರಿ ನಿಧಿ ರಾವ್ ಈ ವರ್ಷದ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ 99.84 ಶೇಕಡ ಅಂಕಗಳಿಸಿ ರಾಜ್ಯಕ್ಕೆ ದ್ವಿತೀಯ ರ್‍ಯಾಂಕ್‌ಗಳಿಸಿದ್ದಾಳೆ.



## ಕೌಶಿಕ್


ಶ್ರೀ ಚಿತ್ತರಂಜನ್ ಕಡಬ ಹಾಗೂ ಶ್ರೀಮತಿ ಸಂಧ್ಯಾರವರ ಪುತ್ರ ಕೌಶಿಕ್ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ 99.68 ಶೇಕಡ ಅಂಕಗಳಿಸಿ ರಾಜ್ಯಕ್ಕೆ ಮೂರನೇಯ ರ್‍ಯಾಂಕ್ ಪಡೆದಿರುತ್ತಾನೆ.




## ಎ.ಎಸ್.ಸಾತ್ವಿಕ್

ನಮ್ಮ ಸಮಾಜದ ಹಿರಿಯ ಕಲಾವಿದ್ವಾಂಸ ಕೀರ್ತಿಶೇಷ ಅಡೂರು ಶ್ರೀಧರ ರಾವ್ ಅವರ ಮೊಮ್ಮಗ ಬೇಲೂರು ನಿವಾಸಿ ವೈದ್ಯ ದಂಪತಿಗಳಾದ ಡಾ। ಸಂತೋಷ ರಾವ್ ಮತ್ತು ಡಾ। ಗೀತಾ ಇವರ ಪುತ್ರ ಎ.ಎಸ್.ಸಾತ್ವಿಕ್ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ರಾಜ್ಯ ಮಟ್ಟದಲ್ಲಿ ನಾಲ್ಕನೇ ರ್‍ಯಾಂಕ್ (99.52% ಅಂಕ) ಪಡೆದಿರುತ್ತಾನೆ.

## ಕುಮಾರಿ ಶಾರದಾ ಕುಸುಮ ರಾವ್ ಐ.ಜಿ



ಈ ವರ್ಷದ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಪುತ್ತೂರು ತಾಲೂಕಿನ ಬೆಟ್ಟಂಪಾಡಿಯ ಪ್ರಿಯದರ್ಶಿನಿ ಆಂಗ್ಲಮಾಧ್ಯಮ ಪ್ರೌಢ ಶಾಲಾ ವಿದ್ಯಾರ್ಥಿನಿಯಾದ ಕುಮಾರಿ ಶಾರದಾ ಕುಸುಮ ರಾವ್ ಐ.ಜಿ ಇವರು 613 (98.08%) ಅಂಕಗಳೊಂದಿಗೆ ವಿಶಿಷ್ಟ ಶ್ರೇಣಿಯಲ್ಲಿ ತೇರ್ಗಡೆ ಹೊಂದಿರುತ್ತಾರೆ. ಇವರು ಬೆಟ್ಟಂಪಾಡಿ ನವೋದಯ ಪ್ರೌಢ ಶಾಲಾ ನಿವೃತ್ತ ಚಿತ್ರಕಲಾ ಶಿಕ್ಷಕರಾದ ಶ್ರೀ ಐ.ಗೋಪಾಲಕೃಷ್ಣ ರಾವ್ ಹಾಗೂ ಶ್ರೀಮತಿ ಪ್ರಜ್ವಲಾ ಗೋಪಾಲಾಕೃಷ್ಣ ರಾವ್ ಇವರ ಸುಪುತ್ರಿ.



## ಅಕ್ಷಯ್

ಉಡುಪಿಯ ಶ್ರೀ ವೈ.ಪ್ರಸಾದ್ ಕುಮಾರ್ ಹಾಗೂ ಸುನೀತಾ ದಂಪತಿಗಳ ಪುತ್ರ ಅಕ್ಷಯ್ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ 597 ಅಂಕಗಳಿಸಿದ್ದಾನೆ.



## ಶ್ರೇಯಾ ರಾವ್

ಕುಕ್ಕೇಹಳ್ಳಿ ಶ್ರೀಪತಿ ರಾವ್ ಹಾಗೂ ಹರಿಣಿ ಇವರ ಪುತ್ರಿ ಶ್ರೇಯಾ ರಾವ್ ಇವಳು ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ 597 ಅಂಕಗಳಿಸಿರುತ್ತಾಳೆ.



## ಜ್ಞಾನೇಶ

ಮೂಡುಬಿದ್ರೆಯ ಜನಾರ್ಧನ ಹಾಗೂ ಪ್ರಮೀಳಾ ದಂಪತಿಗಳ ಪುತ್ರ ಜ್ಞಾನೇಶ 96 ಶೇಕಡ ಅಂಕಗಳನ್ನು ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಗಳಿಸಿರುತ್ತಾನೆ.



## ಪ್ರಾರ್ಥನಾ

ಮಂಗಳೂರಿನ ಶ್ರೀ ಅನಿಲ್ ರಾವ್ ಹಾಗೂ ಶ್ರೀಮತಿ ಭಾರತಿ ದಂಪತಿಗಳ ಪುತ್ರಿ ಕೆನರಾ ಗರ್ಲ್ಸ್ ಹೈಸ್ಕೂಲಿನ ವಿದ್ಯಾರ್ಥಿನಿ ಕುಮಾರಿ ಪ್ರಾರ್ಥನಾ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ 96 ಶೇಕಡ ಅಂಕಗಳಿಸಿದ್ದಾಳೆ.



## ಚಿರಂತನ್

ಸುರತ್ಕಲ್ ತಡಂಬೈಲ್ ಶ್ರೀ ಸುಕುಮಾರ ರಾವ್ ಎಂ.ವಿ. ಹಾಗೂ ಶ್ರೀಮತಿ ಭಾರ್ಗವಿ ಅವರ ಪುತ್ರ ಚಿರಂತನ್ ಸಿ.ಬಿ.ಎಸ್.ಸಿ ಹತ್ತನೇ ತರಗತಿಯ ಪರೀಕ್ಷೆಯಲ್ಲಿ 91 ಶೇಕಡ ಅಂಕಗಳಿಸಿದ್ದಾನೆ.



## ಶೃಂಗೇರಿ ಭೇಟಿ

ತಾರೀಕು 16.08.2020 ರಂದು ವಾಡಿಕೆಯಂತೆ ಚೌತಿಯ ಮುಂಚಿನ ಆದಿತ್ಯವಾರ ಉಡುಪಿ ಸಂಘದ ವತಿಯಿಂದ ಶೃಂಗೇರಿ ಜಗದ್ಗುರುಗಳನ್ನು ಭೇಟಿಯಾಗಿ ಆಶೀರ್ವಾದ ಪಡೆಯಲು ತೆರಳಲಾಯಿತು. ಕಾರ್ಯದರ್ಶಿಗಳಾದ ಶ್ರೀ ಅರವಿಂದ ಕುಮಾರ್ ನೇತೃತ್ವದಲ್ಲಿ ಗುರುಗಳಿಗೆ ಪಾದಪೂಜೆ ಭಿಕ್ಷಾವಂದನೆಗಳನ್ನು ಸಲ್ಲಿಸಿ ಆಶೀರ್ಮಂತ್ರಾಕ್ಷತೆ ಪಡೆದು ಹಿಂತಿರುಗಿದರು.





## ಶ್ರೀ ಕರಂಬಳ್ಳಿ ವೆಂಕಟರಾವ್ ನಿಧನ

ದಿವಂಗತ ಕರಂಬಳ್ಳಿ ಕೃಷ್ಣರಾವ್ ಇವರ ಪುತ್ರ ಶ್ರೀ ಕರಂಬಳ್ಳಿ ವೆಂಕಟರಾವ್ ಇವರು ತನ್ನ 82ನೇ ವಯಸ್ಸಿನಲ್ಲಿ ತಾ.27.08.2020ರಂದು ಅಲ್ಪಕಾಲದ ಅಸ್ವಾಸ್ಥ್ಯದಿಂದ ನಿಧನ ಹೊಂದಿದರು. ಇವರು ಕೆನರಾ ಬ್ಯಾಂಕ್ ಉದ್ಯೋಗಿಯಾಗಿದ್ದು ದೇಶದ ಹಲವಾರು ನಗರಗಳಲ್ಲಿ ಸೇವೆ ಸಲ್ಲಿಸಿದ್ದರು. ನಿವೃತ್ತಿಯ ನಂತರ ಉಡುಪಿಯಲ್ಲಿ ನೆಲೆಸಿ ಸಂಘದ ಚಟುವಟಿಕೆಯಲ್ಲಿ ಸಕ್ರಿಯರಾಗಿದ್ದರು. ಇವರು ಉಡುಪಿ ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ ಇದರ ಕೋಶಾಧಿಕಾರಿಯಾಗಿಯೂ ನಿರ್ದೇಶಕರಾಗಿಯೂ ಆಂತರಿಕ ಲೆಕ್ಕಪರಿಶೋಧಕರಾಗಿಯೂ ಸೇವೆ ಸಲ್ಲಿಸಿದ್ದಾರೆ. ಶ್ರೀಯುತರ ನಿಧನಕ್ಕೆ ಸಂಘದ ಆಡಳಿತ ಮಂಡಳಿಯ ಸಭೆಯಲ್ಲಿ ಸಂತಾಪ ಸೂಚಿಸಲಾಯಿತು. ಶ್ರೀಯುತರ ಕುಟುಂಬಕ್ಕೆ ಅವರ ನಿಧನದ ದು:ಖ ಭರಿಸುವ ಶಕ್ತಿಯನ್ನು ಶಾರದೆಯು ನೀಡಲೆಂದು ಪ್ರಾರ್ಥಿಸುತ್ತೇವೆ.

## 'ಕರೋನಾ' ಕೇಕೆ–ಸಂಗೀತಮದ್ದು!

ವರದಿ : ಶ್ರೀಮತಿ ರಜನಿ ಹೆಬ್ಬಾರ್



ಈ 'ಕರೋನಾ' ಕೇಕೆಯ ಮಧ್ಯೆ, ಹಿರಿಯನಾಗರಿಕರ ಹಾಗೂ ಸಣ್ಣ ಮಕ್ಕಳ ದೈನಂದಿನ ಬದುಕು ಅಸಹನೀಯವಾದಾಗ, ಸಂಘ–ಸಂಸ್ಥೆಗಳು 'ವಾಟ್ಸಾಪ್' ಗುಂಪುಗಳ ಮುಖಾಂತರ ಅವರ ಮನೋರಂಜನೆಗೋಸ್ಕರ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿ ಕೊಳ್ಳುತ್ತಿವೆ. ಈ ದಿಸೆಯಲ್ಲಿ, ಕೆನರಾ ಬ್ಯಾಂಕಿನ ನಿವೃತ್ತ ಅಧಿಕಾರಿಗಳ ಸಂಘ, ಮಂಗಳೂರು, ಇವರು ಹಿರಿಯ ಸದಸ್ಯ ದಂಪತಿಗಳ 'ಸಂಗೀತ ಸ್ಪರ್ಧೆ' ಯೊಂದನ್ನು ಜುಲೈ 15 – ಆಗಸ್ಟ್ 10ರ ಮಧ್ಯೆ ನಡೆಸಿ ಎಲ್ಲರ ಮೆಚ್ಚುಗೆಗೆ ಪಾತ್ರವಾಯಿತು. ಸುಮಾರು 112 ಸದಸ್ಯರು ಭಾಗವಹಿಸಿ ವಿವಿಧ ರೀತಿಯ ಸಂಗೀತವನ್ನು ವಾಟ್ಸಾಪ್ ಮೂಲಕ ಹಾಡಿ ಮನರಂಜಿಸಿದರು. ಆರು ಪ್ರಕಾರಗಳಲ್ಲಿ (ಸೋಲೋ (Solo) ಯುಗಳ (Duet) ದಂಪತಿಗಳು ಭಾಗವಹಿಸಿ ತೀರ್ಪುಗಾರರ ಮೆಚ್ಚುಗೆಗೆ ಪಾತ್ರವಾದರು. ಪ್ರಾಯ 75 ರಿಂದ ಮೇಲ್ಪಟ್ಟ ಸದಸ್ಯರ ಗುಂಪಿನಲ್ಲಿ ನಮ್ಮ ಸ್ಥಾನಿಕ ಬ್ರಾಹ್ಮಣ ಸಂಘ, ಉಡುಪಿಯ ಸದಸ್ಯರಾದ ಶ್ರೀ ಜೆ.ಕೆ.ಕೋಲ್ಪೆ (ಬ್ಯಾಂಕಿನ ನಿವೃತ್ತ ಹಿರಿಯ ವ್ಯವಸ್ಥಾಪಕರು) ಹಾಗೂ ಅವರ ಪತ್ನಿ ಶ್ರೀಮತಿ ಯಶೋಧಾ ಕೋಲ್ಪೆಯವರು ಭಾಗವಹಿಸಿ ಎರಡು ಬಹುಮಾನಗಳನ್ನು ಪಡೆದಿದ್ದಾರೆ. ಬ್ಯಾಂಕಿನ ನಿವೃತ್ತ ಮಹಾಪ್ರಬಂಧಕರೋರ್ವರು, ಕೋಲ್ಪೆ ದಂಪತಿಗಳು ಯುವ ಪ್ರತಿಭೆಗಳಂತೆ 'ವೇಷಭೂಷಣ' ಧರಿಸಿ ಸ್ಪರ್ಧೆಯಲ್ಲಿ ಭಾಗವಹಿಸಿದ್ದನ್ನು ಸ್ಮರಿಸಿ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಇದಲ್ಲದೆ ಕೋಲ್ಪೆಯವರ ಬ್ಯಾಂಕ್ ಸ್ನೇಹಿತರು ಹಾಗೂ ಸಂಬಂಧಿಕರು ಈ ಇಳಿವಯಸ್ಸಿನ ದಂಪತಿಗಳನ್ನು ಪ್ರಶಂಸಿದ್ದಾರೆ.

**ಕವನ**

ಉಮೇಶ್ ರಾವ್ ಕೆ.



### ಶಿಕ್ಷಕ

ಪುಸ್ತಕ ಪುಸ್ತಕದ ಮಧ್ಯದ ಒಂದು ಕೊಂಡಿ
ನಿನ್ನಿಂದ ಸಾಗುತಿಹುದು ಜೀವನದ ಬಂಡಿ
ನೀ ಕೊಟ್ಟ ವಿದ್ಯೆ ನಮಗಾಯ್ತು ತಿಂಡಿ
ಜಗವ ತೋರಿದೆ ನೀ ತೆರೆದು ಕಣ್ಣ ಕಿಂಡಿ

ಮೋಹಕ ಮಾತಿಂದ ಮನವ ನೀ ಗೆದ್ದೆ
ನೀನಿಲ್ಲದಿರಲಾಯ್ತು ಜೀವನ ಬರಡು ಗದ್ದೆ
ಬಾಲರೊಳಗೊಂದಾಗಿ ನೀ ಹಾಡುತಲಿದ್ದೆ
ನೋಡಲದನು ಸಂತಸದಿ ಕಣ್ಣಾಯ್ತು ಒದ್ದೆ

ಅ ಆ ಇ ಈ ಬರೆಯುದನು ನೀ ಕಲಿಸಿಕೊಟ್ಟೆ
ವಿದ್ಯಾಧಿ ದೇವಿಯನು ನಮ್ಮ ಪಾಲಿಗೆ ಬಿಟ್ಟೆ
ಕೆಟ್ಟ ದಾರಿಯ ಬಿಟ್ಟು ಶಿಷ್ಟ ರೂಪದ ಪಟ್ಟೆ
ತುಂಬಿಹುದದಕಾಗಿ ಇಂದು ನಮ್ಮ ಹೊಟ್ಟೆ

ಕಾಲೇಜು ಮೆಟ್ಟಲನು ನೀ ಏರಿಸಿ ಬಿಟ್ಟೆ
ದೇಶ ವಿದೇಶ ಹಾರಿತು ಬಣ್ಣ ಬಣ್ಣದ ಚಿಟ್ಟೆ
ದೇಶ ಕಟ್ಟುವ ಕಾರ್ಯ ನೀ ನಮಗೆ ಕೊಟ್ಟೆ
ದೇಶಕ್ಕಾಗಿ ದುಡಿಯುವ ಪಣವ ನಾ ತೊಟ್ಟೆ

With Best Compliments From :

***Rajathadri Hotel Pvt. Ltd.
Lodging & Boarding

Sri Ramesh Shanubhag, Usha, Sanketh and Kavitha
Directors



OUR FACILITIES
★ A/c Rooms ★ Deluxe Rooms ★ 3, 4, 5 Cot Rooms
★ Room Service ★ T.V. with Cable Connection ★ Hot Water


SHIVAJI CIRCLE, POWAI NAKA, SATARA-415001
Ph : 02162-234017, 233818
Fax : 02162-233885 E-mail : rajathadri.satara@gmail.com



ತಾ.31.08.2020ರಂದು ಮೂಡುಬಿದಿರೆ ಶ್ರೀ ಆದಿಶಂಕರ ಸ್ಥಾನಿಕ ಬ್ರಾಹ್ಮಣ ಪರಿಷತ್ತು (ರಿ.) ವತಿಯಿಂದ ಋಗುಪಾಕರ್ಮವನ್ನು ಜರುಗಿಸಲಾಯಿತು.



ಶ್ರೀ ಸುಬ್ರಹ್ಮಣ್ಯ ಸಭಾ, ಮಂಗಳೂರು ವತಿಯಿಂದ ಋಗುಪಾಕರ್ಮ ತಾ.31.08.2020 ಸೋಮವಾರ ಸದನದಲ್ಲಿ ನಡೆಯಿತು. ವೇ.ಮೂ.ಪಾವಂಜೆ ಜಗದೀಶ್ ಉಪಾಧ್ಯಾಯರು ಉಪಾಕರ್ಮ, ಹೋಮ ಹಾಗೂ ಧಾರ್ಮಿಕ ವಿಧಿ ವಿಧಾನಗಳನ್ನು ನಡೆಸಿದರು. ಶ್ರೀಸಭಾದ ಅಧ್ಯಕ್ಷ ಶ್ರೀ ಹರ್ಷಕುಮಾರ್ ಕೇದಿಗೆ, ಪದಾಧಿಕಾರಿಗಳು, ನಿರ್ದೇಶಕರುಗಳು, ಸದಸ್ಯರುಗಳು ಸೇರಿದಂತೆ ಸುಮಾರು 60 ಸಮಾಜ ಬಾಂಧವರು ಸಾಮಾಜಿಕ ಅಂತರ ಕಾಯ್ದುಕೊಂಡು ಕಾರ್ಯಕ್ರಮದಲ್ಲಿ ಭಾಗವಹಿಸಿದರು. ಡಾ|ನಂದಕಿಶೋರ್ ಕಾರ್ಯಕ್ರಮದ ಖರ್ಚು-ವೆಚ್ಚಗಳನ್ನು ಪ್ರಾಯೋಜಿಸಿ ಸಹಕರಿಸಿದರು. ಕೋಶಾಧಿಕಾರಿ ಶ್ರೀ.ಪಿ.ಶ್ರೀಕಾಂತ್ ರಾವ್ ಧನ್ಯವಾದ ನೀಡಿದರು.

ತಾ.17-08-2020ರಿಂದ 16-09-2020ರ ತನಕ ಪಡುಬಿದ್ರೆಯ ಪಾದೆಬೆಟ್ಟು ವಿಷ್ಣುಮೂರ್ತಿ ದೇವಸ್ಥಾನದಲ್ಲಿ ಸೋಣಾರಾರತಿಗಾಗಿ ಅಲಂಕೃತ ವಿಷ್ಣುಮೂರ್ತಿ ಹಾಗೂ ಗಣಪತಿ ದೇವರು.

## ಶ್ರೀ ಎಚ್.ಆರ್.ವಿಶ್ವಾಸ್ ರಾವ್



ನೀಲಾವರ ಲಕ್ಮೀನಾರಾಯಣಯ್ಯನವರ ಪೌತ್ರ, ಬ್ರಹ್ಮಾವರ ರವೀಂದ್ರ ಎಸ್.ಎಲ್. ಹಾಗೂ ವಿಜಯಲಕ್ಷ್ಮೀ ಇವರ ಪುತ್ರ ಶ್ರೀ ಎಚ್.ಆರ್.ವಿಶ್ವಾಸ್ ರಾವ್ ಬಿ.ಇ. ಪದವೀಧರರಾಗಿದ್ದು ಚೆನ್ನೈಯಲ್ಲಿ ಉದ್ಯೋಗದಲ್ಲಿದ್ದು ಇವರು ಸೈಬರ್ ಸೆಕ್ಯೂರಿಟಿಗೆ ಸಂಬಂಧಿಸಿದ ಪರೀಕ್ಷೆಯಲ್ಲಿ ಉನ್ನತ ದರ್ಜೆಯಲ್ಲಿ ತೇರ್ಗಡೆಯಾಗಿರುತ್ತಾರೆ.



31.08.2020 ರಂದು ಬಾಲಗಣಪತಿ ದೇವಸ್ಥಾನ ಪಡುಬಿದ್ರೆಯಲ್ಲಿ ಋಗುಪಾಕರ್ಮವನ್ನು ಆಚರಿಸಲಾಯಿತು. ಅಂದು ಶೃಂಗೇರಿ ಗುರುಗಳಿಗೆ ಗುರುಕಾಣಿಕೆಯುನ್ನು ಕಳುಹಿಸಿಕೊಡಲಾಯಿತು.

## ಶ್ರೀ ಪ್ರದೀಪ್ ಕುಮಾರ್ ಪಂಜ



ಶ್ರೀ ಪ್ರದೀಪ್ ಕುಮಾರ್ ಪಂಜ ಇವರು ಕರ್ನಾಟಕ ಬ್ಯಾಂಕಿನ ಇಂಡಿಪೆಂಡೆಂಟ್ ಡೈರೆಕ್ಟರ್ ಆಗಿ ನಿಯುಕ್ತರಾಗಿದ್ದಾರೆ. ಇವರು ಪ್ರಸ್ತುತ ಬೆಂಗಳೂರು ಸಂಘದ ಉಪಾಧ್ಯಕ್ಷರಾಗಿಯೂ ಸೇವೆ ಸಲ್ಲಿಸುತ್ತಿದ್ದಾರೆ. ಇವರು ಪಂಜ ಶ್ರೀ ಭಾಸ್ಕರ ರಾವ್ ಹಾಗೂ ಸರೋಜಿನಿ ರಾವ್‌ರವರ ಪುತ್ರ. ಇವರು ಸ್ಟೇಟ್‌ಬ್ಯಾಂಕ್ ಆಫ್ ಇಂಡಿಯಾದ ಮ್ಯಾನೇಜಿಂಗ್ ಡೈರೆಕ್ಟರ್ ಆಗಿಯೂ, ಸ್ಟೇಟ್‌ಬ್ಯಾಂಕ್ ಆಫ್ ತಿರುವಾಂಕೂರು ಇದರ ಮ್ಯಾನೇಜಿಂಗ್ ಡೈರೆಕ್ಟರ್ ಆಗಿಯೂ ಹಾಗೂ ಬ್ಯಾಂಕಿಂಗ್ ಕ್ಷೇತ್ರದ ಇನ್ನೂ ಅನೇಕ ಉನ್ನತ ಹುದ್ದೆಗಳನ್ನು ನಿರ್ವಹಿಸಿದ್ದಾರೆ.

## ಶ್ರೀ ಕೆ.ಸತೀಶ್ ರಾವ್



ಉಡುಪಿ ಜಿಲ್ಲೆಯ ಶಿಕ್ಷಣ ಇಲಾಖೆಯ ವತಿಯಿಂದ ಅತ್ಯುತ್ತಮ ಶಿಕ್ಷಕರಾಗಿ ಶ್ರೀ ಕೆ.ಸತೀಶ್ ರಾವ್ ಆಯ್ಕೆಯಾಗಿದ್ದಾರೆ. ಇವರು ಕಾರ್ಕಳ ತಾಲೂಕಿನ ವಿಳಿಯಾರ ಕೌಡೂರು ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯಶಿಕ್ಷಕರಾಗಿದ್ದಾರೆ. ಜೊತೆಗೆ ಸಾಮಾಜಿಕ ಸೇವಾಕ್ಷೇತ್ರಗಳಲ್ಲಿಯೂ ಗುರುತಿಸಿಕೊಂಡಿದ್ದಾರೆ.

## ಶ್ರೀ ಅಜಯ್ ಕುಮಾರ್



ಅಖಿಲ ಕರ್ನಾಟಕ ಬ್ರಾಹ್ಮಣ ಅರ್ಚಕ ಹಾಗೂ ಪುರೋಹಿತರ ಸಂಘದ ಬೆಳ್ತಂಗಡಿ ತಾಲೂಕಿನ ಸಂಘಟನಾ ಕಾರ್ಯದರ್ಶಿಯಾಗಿ ಶ್ರೀ ಅಜಯ್ ಕುಮಾರ್ ಇವರು ಆಯ್ಕೆಯಾಗಿದ್ದಾರೆ.

## ಹರ್ಷದೀಪ್ ರಾವ್



ಅಕ್ಕ ವರ್ಚುವಲ್ ಕನ್ನಡ ಸಮ್ಮೇಳನದಲ್ಲಿ ಕುಕ್ಕಿಕಟ್ಟೆ ರಾಮಮೂರ್ತಿ ರಾವ್ ಇವರ ಪುತ್ರ ಹರ್ಷದೀಪ್ ಇವರು ಸಂಗೀತ ಸ್ಪರ್ಧೆಯಲ್ಲಿ ದ್ವಿತೀಯ ಸ್ಥಾನಿಯಾಗಿ ಮೂಡಿ ಬಂದಿದ್ದಾರೆ.










Owned, Published & Edited by : Sri Y. Muralikrishna Rao onbehalf of Sri Sthanika Dravida Brahmana Sangha (R.), Shri Sharada Mantapa, Sharada Nagara, Kunjibettu, Udupi - 576 102. Ph : 0820-2520754
Designed & Printed @ SriNidhi Computer Graphics, Rajataadri, Manipal. E-mail : srisharadaudupi@gmail.com Website : www.srisharada.org